Sri D. B. KALMANKAR (Aland).—After this Act came into force in 1964, I want to know whether any amendments to it have been made subsequently. If any amendments have been made, for what purpose were they done?

ಶ್ರೀ ಎನ್. ಎಮ್. ಕೊಟ್ರಬಸಯ್ಯ ಸೋಗಿ.—1963ರಲ್ಲಿ ಆದದ್ದು ಒರಿಜಿನಲ್ ಆಕ್ಟು, 1966 ರಲ್ಲಿ ಒಂದು ಅಮೆಂಡ್‌ಮೆಂಟ್ ಆಗಿದೆ, ಈಗ ಆಗುತ್ತಾ ಇರುವುದು ಎರಡನೇ ಅಮೆಂಡಮೆಂಟು.

ಶ್ರೀ ಎಂ. ನಾಗಪ್ಪ.—ಸನ್ಮಾನ್ಯ ಅಧ್ಯಕ್ಷರೇ ಮೈಸೂರು ಗಿಫ್ಟ್ ಗುಡ್ಸ್ ಅನ್‌ಲಾಫುಲ್ ಪೊಸೆಷನ್ ಅಮೆಂಡ್‌ಮೆಂಟ್ ಬಿಲ್ 1968 ಅಂತ ಹೇಳಿ ಸೆಕ್ಷನ್ 5(ಸಿ) ಎನ್ನುವ ಒಂದು ಸೆಕ್ಷನ್ ಸೇರಿಸಬೇಕೆಂದು ಒಂದು ತಿದ್ದುಪಡಿಯನ್ನು ತಂದಿದ್ದಾರೆ. ಇದರಲ್ಲಿ ಕೆಲವು ವಿಷಯಗಳ ಬಗ್ಗೆ ವಿರೋಧಿಸುತ್ತೇನೆ. ಇನ್‌ಸೆಂಟಿವ್ ಕೊಡುವುದಕ್ಕಾಗಿ ಐ. ಜಿ. ಪಿ. ಯವರು ರೆಕಮೆಂಡ್ ಮಾಡಿದ್ದರು, ಅವರಮೇಲೆ ಈ ತಿದ್ದುಪಡಿ ಬಿಲ್ ತಂದಿದ್ದೇನೆ. ಎಂದು ಮಾನ್ಯ ಮಂತ್ರಿಗಳು ಈ ಮಾನ್ಯ ಸಭೆಗೆ ಹೇಳಿದರು. ಇವನ್ನು ಇನಿಷಿಯೇಟ್ ಮಾಡುತ್ತಾ ಇಷ್ಟು ಕೇಸುಗಳು ರಿಪೋರ್ಟ್ ಆದವು, ಎಷ್ಟು ಕೇಸುಗಳಲ್ಲಿ ಕನ್ವಿಕ್ಷನಗಳಾಗಿವೆ, ಎಷ್ಟು ಸರಿಯಾಗಿ ಉಪಯೋಗವಾಗಿಲ್ಲ ಎಂಬ ಬಗ್ಗೆ ಅಂಕಿಅಂಶ

ಗಳನ್ನು ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ಸ್ ಅಂಡ್ ರೀಸನ್ಸ್‌ನಲ್ಲಿ ಹೇಳಿಲ್ಲ. ಅದೂ ಅಲ್ಲದೇ ಈಗಲೂ ಕೂಡ ಈ ನಭೆಗೆ ಆ ತರಹದ ಮಾಹಿತಿಯನ್ನು ಅವರಿಂದ ಒದಗಿಸಲಕ್ಕೆ ಆಗಲಲ್ಲ. ದಂಡದ ರೂಪವಾಗಿ ವಸೂಲು ಮಾಡತಕ್ಕ ಹಣದಲ್ಲಿ ಅರ್ಧ ಭಾಗದಷ್ಟು ಹಣವನ್ನು ಪೋಲೀಸ್‌ನವರಿಗೆ ಇನಾಂ ಆಗಿ ಕೊಡಬೇಕೆಂಬ ಉದ್ದೇಶ ಸರ್ಕಾರಕ್ಕೆ ಇದೆ. ಇದು ಯಾವ ಹಾದಿಯನ್ನು ಹಿಡಿಯಬಹುದು ಎಂಬುದನ್ನು ನಾವು ಮೊದಲು ಪರಿಶೀಲನೆ ಮಾಡಬೇಕಾಗುತ್ತದೆ. ದೇಶದಲ್ಲಿ ಈಗ ಎಷ್ಟೋ ಡಕಾಯಿತಿಗಳು ಆಗುತ್ತವೆ, ಖೂನಿಗಳಾಗುತ್ತವೆ, ಇನ್ನಿತರ ಕಾಗ್ನೈಜಬಲ್ ಅಫೆನ್ಸ್‌ಸ್ ಆಗುತ್ತವೆ. ಅದರ ಪೈಕಿ ಈ ಕಾಗ್ನೈಜಬರ್ ಅಫೆನ್ಸ್‌ಗೆ ಮಾತ್ರ ಐ. ಜಿ. ಪಿ. ಯವರು ಏಕೆ ರೆಕಮೆಂಡ್ ಮಾಡಿದರೋ ಗೊತ್ತಿಲ್ಲ. ಈ ತಿದ್ದುಪಡಿಯ ಪರಿಮಿತಿ ಎಷ್ಟಕ್ಕೆ ಬರುತ್ತದೆ, ಇದರ ಉಪಯೋಗ ಎಷ್ಟರ ಮಟ್ಟಿಗೆ ಆಗುತ್ತದೆ, ಇದರಲ್ಲಿ ಕಷ್ಟ ಎಷ್ಟರಮಟ್ಟಿಗೆ ಆಗಬಹುದು ಎಂಬ ವಿಷಯವನ್ನು ಗಮನಿಸಿ ನೋಡಿದರೆ ವರ್ಷದಲ್ಲೆರ್ಲಾ ಇಂತಹ ಕೇಸುಗಳು ಆಗುವುದೇ ಒಂದು ಅಥವಾ ಎರಡು. ಅಂತಹದರಲ್ಲಿ ಈ ರೀತಿ ಒಂದು ಇನ್‌ಸೆಂಟೀವ್ ಕೊಡುವುದಾದರೆ ಪೋಲೀಸ್ ಖಾತೆಯ ಮೇಲೆ ಕೆಟ್ಟ ಪರಿಣಾಮವಾಗುತ್ತದೆ. ಈಗ ಮೊದಲು ಕಂಪ್ಲೈಂಟ್ ಪೋಲೀಸ್ ಸ್ಟೇಷನ್‌ಗೆ ಹೋದರೆ ಅವನು ರೆಮ್ಯೂನರೇಷನ್ ಕೊಟ್ಟ ಹೊರತು ಕಂಪ್ಲೇಂಟ್ ರಿಜಿಸ್ಟರ್ ಆಗುವುದಿಲ್ಲ, ಅಂತಹ ಪರಿಸ್ಥಿಯಲ್ಲಿ ಇಂಥ ಒಂದು ಇನ್‌ಸೆಂಟೀವ್ ಕೊಡಬೇಕು, ಅಂತ ಹೇಳಿ ಅವಕಾಶ ಮಾಡಿಕೊಡುವುದಾದರೆ ಕೇಸು ಇಲ್ಲದೇ ಹೋದರೂ ಕೂಡ ಇನಾಂ ಪಡೆಯುವುದಕ್ಕಾದರೂ ಕೇಸುಗಳನ್ನು ಮಾಡುವಂತಹ ಒಂದು ನನ್ನಿವೇಶವನ್ನು ಕಲ್ಪಿಸಿ ಕೊಟ್ಟಹಾಗೆ ಆಗುತ್ತದೆ. ಕೋರ್ಟುಗಳಿಗೆ ಕೇಸುಗಳನ್ನು ದಾಖಲು ಮಾಡಿ ಸಾಕ್ಷ್ಯಗಳನ್ನು ತಯಾರು ಮಾಡಿಕೊಂಡು ಅವರ ಹೇಳಿಕೆ ಕೊಡಿಸಿ ಪೋಲೀಸಿನವರು ಹಣವನ್ನು ಪಡೆಯಲು ಪ್ರಯತ್ನ ಮಾಡುತ್ತಾರೆ. ನಮ್ಮ ಅನುಭವದಲ್ಲಿ ಇರುವುದನ್ನು ಹೇಳಬೇಕಾದರೆ ಮಾಲು ಸಿಕ್ಕಿತ್ತು ಅಂತ ಪಂಚನಾಮೆ ಮಾಡುತ್ತಾರೆ, ಇದರಿಂದ ದೇಶಕ್ಕೆ ಅನಾಹುತವಾಗುತ್ತದೆಯೇ ಹೊರತು ಯಾವ ತರಹದ ಲಾಭವೂ ಆಗುವುದಿಲ್ಲ. ಪೋಲೀಸ್‌ನವರ ಬಗ್ಗೆ ಒಳ್ಳೆಯ ಅಭಿಪ್ರಾಯ ಇಟ್ಟುಕೊಂಡಿದ್ದರೆ, ಪೋಲೀಸ್ ಡಿಪಾರ್ಟ್‌ಮೆಂಟಿನಲ್ಲಿರತಕ್ಕ ಕರಪ್ಷನ್ ಇನ್ನಿತರ ವಿಷಯಗಳನ್ನು ತೆಗೆದುಹಾಕಬೇಕೆಂಬ ಉದ್ದೇಶ ತಪ್ಪಾಗಿ ಇದ್ದರೆ ವಾಸ್ತವವಾಗಿ ಅವರ ಆಗುಹೋಗುಗಳನ್ನು ನೋಡಿ, ಅವರಿಗೆ ಹೆಚ್ಚು ನಂಬಿಕೆಯನ್ನು ಕೊಡ್ರಿ, ಅವರಿಗೆ ಬೇಕಾದ ಸೌಲಭ್ಯಗಳನ್ನು ಕೊಡ್ರಿ ಯಾರೂ ಅದನ್ನು ವಿರೋಧಿಸುವುದಿಲ್ಲ. ಆದರೆ ಈಗ ತಂದಂತಹ ಬಿಲ್ ಮೂಲಕ ಅವರಿಗೆ ಸ್ಯಾಡಿಸ್ಟ್ಯುಟೆರಿ ಪವರ್ಸ್ ಕೊಟ್ಟು, ಇನಾಂ ಕೊಡುತ್ತೇವೆ, ಇನ್‌ಸೆಂಟೀವ್ ಕೊಟ್ಟು ಲಾಭ ಮಾಡುತ್ತೇವೆ ಅಂತ ಅನ್ನುವ ಉದ್ದೇಶ ಏನಿದೆ ಇದು ನ್ಯಾಯಾದ್ದಲ್ಲ ಎಂಬ ಮಾತನ್ನು ಸ್ಪಷ್ಟಪಡಿಸುತ್ತೇನೆ.

ಅವನು ಇಲ್ಲ ನೂಚಿಸಿರತಕ್ಕ ತಿದ್ದುಪಡಿಯಲ್ಲಿ ಏನಿದೆ ಎಂದರೆ—ಅದನ್ನು ನಾವು ವಾಸ್ತವಿಕವಾಗಿ ಗಮನಿಸಿದರೆ—

> " The Magistrate, trying any case under this Act may award any portion not exceeding one-half of any fine which may be levied under section 3..... "

ಇಷ್ಟು ಅಮೌಂಟನ್ನು ಅವರು ಜುರ್ಮಾನೆಯ ರೂಪದಲ್ಲಿ ರೆವಿ ಮಾಡಬಹುದೆಂದು ಹೇಳಿದೆ. ಇದರಲ್ಲಿ ಅರ್ಧ ಭಾಗವನ್ನು ಇನಾಂ ರೂಪದಲ್ಲಿ ಕೊಡಬಹುದು ಎಂದು ಹೇಳಿದ್ದಾರೆ, ಆದರೆ ಆ ಕಲಂಗೆ ಇರತಕ್ಕದ್ದು 200 ರೂಪಾಯಿಗಳ ಜುರ್ಮಾನೆ. ಆದರೆ ಅದರ ಬಗ್ಗೆ ವಿಚಾರಣೆ ನಡೆಸತಕ್ಕ ನ್ಯಾಯಾಧೀಶ 25 ರೂಪಾಯಿಗಳ ದಂಡವನ್ನು ಹಾಕಬಹುದು. ಆಂದಾಗ ಈ ಇನಾಂ ರೂಪದಲ್ಲಿ ಕೊಡತಕ್ಕ ಅರ್ಧಭಾಗವನ್ನು ಅಂದರೆ ಸೆಕ್ಷನ್ನಿನ ಕಕ್ಷೆಯಲ್ಲಿ ಬರತಕ್ಕ 200 ರೂಪಾಯಿಗಳ ಅರ್ಧ ವೆಂದೋ ಅಥವಾ ಆ ನ್ಯಾಯಾಧೀಶರು ವಿಧಿಸುವ ದಂಡದಲ್ಲಿ ಅರ್ಧವೆಂತರೋ ಯಾವುದೂ ಇಲ್ಲ ಸರಿಯಾಗಿ ವಿವರವಾಗಿ ಹೇಳಿಲ್ಲ. ಇಲ್ಲಿ ಇರತಕ್ಕ ಸೆಕ್ಷನ್ನನ್ನು ಓದಿದರೆ ಸರಿಯಾಗಿ ಅರ್ಥವಾಗುತ್ತಿಲ್ಲ, ಮಾನ್ಯ ಮಂತ್ರಿಗಳು ಹೇಳತಕ್ಕ ಅರ್ಥ ಇದರಲ್ಲಿ ಬರುವುದಿಲ್ಲ.

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಮಾನ್ಯ ಸದಸ್ಯರು ಬಹಳ ಬುದ್ಧಿವಂತರು ಹಾಗೂ ಮೇಧಾವಿಗಳು. ಇವರ ಬಗ್ಗೆ ನಾನು ಹೆಚ್ಚು ಹೇಳಬೇಕಾದ್ದಿಲ್ಲ... The Section says :

> " ..... may award any portion not exceeding one-half of any fine which may be *levied* under section 3... .. "

It does not say : " which may be *leviable*." The law may provide for awarding a fine of Rs. 200 but what is levied actually by the Magistrate may be Rs. 25. So one-half of what is actually levied as fine, may be awarded to the Police.

Sri M. NAGAPPA.—It may be Government's intention. ಹಾಕತಕ್ಕ ಜೂರ್ಮಾನೆಯಲ್ಲಿ ಅರ್ಧ ಎಂದು ಅರ್ಥವಾಗುತ್ತದೆ.

Sri N. M. KOTRABASAIAH SOGI.—I have to repeat. There may be provision for levying Rs. 200 fine. The Magistrate has to award a portion of the fine levied, not exceeding one-half of what is levied. Hon. Member must remember that it is one-half of the levied fine, *not leviable* fine.

ಶ್ರೀ ಎಂ. ನಾಗಪ್ಪ.—ಇಲ್ಲಿ ಇದರ ಹಿಂದಿನ ಕ್ಲಾಜನ್ನು ಓದಿದರೆ ಏನು ಅರ್ಥವಾಗುತ್ತದೆ !

Sri N. M. KOTRABASAIAH SOGI.—Section 3 only empowers the Magistrate to levy the fine. This clause empowers to award payment of a portion of fine to the Police and others.

Mr. DEPUTY SPEAKER.—The Hon. Deputy Minister could convince the Hon. Member while replying to the debate and not now.

Sri M. NAGAPPA.—The original Act is not furnished. So it is misleading to the House. ಸೆಕ್ಷನ್ನಿನ ಪರಿಮಿತಿಯಲ್ಲಿರತಕ್ಕ ಮೊಬಲಗಿನಲ್ಲಿ ಅರ್ಧವೋ ಅಥವಾ ಹಾಕತಕ್ಕ ದಂಡದಲ್ಲಿ ಅರ್ಧವೋ ಅದನ್ನು ನರಿಯಾಗಿ ಹೇಳಲ್ಲ. We cannot say what the interpretation will be some time later. ಇದರಿಂದ ಮುಂದೆ ಅಧಿಕಾರಿಗಳಲ್ಲಿ ತಿಕ್ಕಾಟ ಬರಬಹುದು. ಇದನ್ನು ಸೂಕ್ತ ರೀತಿಯಲ್ಲಿ ತಿದ್ದುಪಡಿ ಮಾಡಬೇಕೆಂದು ಹೇಳುತ್ತೇನೆ. ಇದರಿಂದ ಪೋಲೀಸಿನವರಿಗೂ ಅಂಥಾ ಒಂದು ಇನ್‌ಸೆಂಟೀವ್‌ನೂ ಬರುವುದಿಲ್ಲ. ಆದರೆ ಇಲ್ಲಿ ಅದರ್ ಪರ್ಸನ್ಸ್ ಎಂಬ ಒಂದು ಶಬ್ದ ಇದೆ. ಇದನ್ನು ನಾವು ಸ್ವಾಗತಿಸಬಹುದು. ಏಕೆಂದರೆ, ಇವತ್ತು ಪೋಲೀಸಿನವರಿಗೆ ಈ ರಾಜ್ಯದಲ್ಲಿ ಒಂದು ಇನ್‌ಫರ್‌ಮೇಷನ್ ಕೊಟ್ಟರೆ, ಆ ಇನ್‌ಫರ್‌ಮೇಷನ್ ಉಪಯೋಗಿಸಿಕೊಂಡು ತಾವು ಕಷ್ಟ ಪಟ್ಟು ಕೆಲಸ ಮಾಡುತ್ತಾ ಇಲ್ಲ. ಅಂತಹ ಪರಿಸ್ಥಿತಿಯಲ್ಲಿ ಇಬ್ಬರಿಗೂ ಭಾಗ ಕೊಡಬೇಕೆಂದು ಮಾಡಿದರೆ, ಆಗ ಗಿಫ್ಟ್ ಗುಡ್ಸ್ ಇನ್‌ಫಾರ್ಮೆಂಟ್‌ನ ಹೆಸರು ತೆಗೆದುಹಾಕಿ ಪೋಲೀಸರೇ ಉಳಿದ ಅರ್ಧ ಹಣವನ್ನು ತೆಗೆದುಕೊಳ್ಳುವ ಪರಿಸ್ಥಿತಿ ಬರುತ್ತದೆ. ಅದಕ್ಕಾಗಿ ಪೋಲೀಸ್ ಆಫೀಸರುಗಳಿಗೆ ಇನ್‌ಸೆಂಟೀವ್ ಕೊಡುವ ಉದ್ದೇಶವನ್ನು ಸರ್ಕಾರದವರು ಕೈಬಿಡಬೇಕು. ಇನ್‌ವೆಸ್ಟಿಗೇಷನ್ನಿನಲ್ಲಿ ಯಾರಾದರೂ ಸಹಾಯ ಮಾಡಿ ಪಾಲು ಇಂತಹ ಕಡೆ ಇದೆ ಎಂದು ಹೇಳುತ್ತಾರೋ ಅಂತಹ ಪಬ್ಲಿಕ್ ಜನರಿಗೆ ಬೇಕಾದರೆ ಸರ್ಕಾರದವರು ಇನ್‌ಸೆಂಟೀವ್ ಕೊಟ್ಟರೆ ನಾನು ಅದಕ್ಕೆ ಬೆಂಬಲ ಕೊಡುತ್ತೇನೆ. ಅದಕ್ಕಾಗಿ ಈ ಸೆಕ್ಷನ್ನನ್ನು ಸೂಕ್ಷ್ಮವಾಗಿ ತಿದ್ದುಪಡಿಮಾಡಿ ಈ ಸಭೆಯ ಮುಂದೆ ಸರ್ಕಾರ ಇನ್ನೊಂದು ಸಾರಿ ಇಟ್ಟರೆ ಅದನ್ನು ನಾವು ಪರಿಶೀಲನೆಮಾಡುವುದಕ್ಕೆ ಉಪಯೋಗವಾಗುತ್ತದೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಸಭಾಪತಿಗಳೇ, ಮಾನ್ಯ ಉಪನಿವರು ಈ ಒಂದು ಕಾನೂನು ವಿಷಯದಲ್ಲಿ ಏನೊಂದು ಅರ್ಥ ವಿವರಣೆ ಕೊಟ್ಟರೋ ಅದನ್ನು ನಾನು ಕೂಲಂಕಷವಾಗಿ ಪರಿಶೀಲಿಸಿದ್ದೇನೆ ಅವರು ಹೇಳಿದ ಹಾಗೆ, ಈ ಮೈಸೂರು ಗಿಫ್ಟ್ ಗುಡ್ಸ್ ಅನ್‌ರಾಫುಲ್ ಪೊಸಿಷನ್ ಅಮೆಂಡ್‌ಮೆಂಟ್ ಬಿಲ್ ಬಗ್ಗೆ ಕೆಲವೊಂದು ವಿಚಾರಗಳನ್ನು ಮಾತ್ರ ಸೂಚನೆ ಮಾಡಿದ್ದಾರೆ. ಉದಾಹರಣೆಗೆ ಯಾರಾದರೂ ಗಿಫ್ಟ್ ಗುಡ್ಸ್ ದುರುಪಯೋಗವಾಗಿದೆ ಎಂಬುದಾಗಿ ದೂರು ಕೊಟ್ಟರೆ, ಅಂಥಾದ್ದನ್ನು ಪೋಲೀಸಿನವರು ಕಂಡುಹಿಡಿದುಕೊಟ್ಟರೆ ಅವರಿಗೂ ಅವರಲ್ಲಿ ಒಂದು ಭಾಗ ಕೊಡಬೇಕೆಂದು ಹೇಳಿದ್ದೀರಿ. ಇದನ್ನು ನಾನು ತೀವ್ರವಾಗಿ ವಿರೋಧಮಾಡುತ್ತೇನೆ. ಪೋಲೀಸ್ ಆಫೀಸರುಗಳನ್ನು ಇವತ್ತಿನ ದಿವಸ ಅಂತಹದನ್ನು ಕಂಡುಹಿಡಿಯುವುದಕ್ಕಾಗಿಯೇ ನೇಮಿಸಿರುವುದು. ಅಂದಮೇಲೆ ಇವತ್ತಿನದಿವಸ ಫೈನ್ ಹಾಕಿರುವುದರಲ್ಲಿ ಪೋಲೀಸ್ ಆಫೀಸರುಗಳಿಗೆ ಅರ್ಧ ಭಾಗ ಕೊಡಬೇಕೆಂದು ಹೇಳಿದರೆ ಹೇಗೆ ! ಪೋಲೀಸ್ ಇಲಾಖೆ ಇರುವುದು, ದರೋಡೆಕಾರರನ್ನು ಹಿಡಿಯುವುದಕ್ಕೆ, ಕಳ್ಳಕಾಕರನ್ನು ಹಿಡಿಯುವುದಕ್ಕೆ, ಲೂಟಿಗಾರರನ್ನು ಹಿಡಿಯುವುದಕ್ಕೆ. ಈ ಗಿಫ್ಟ್ ಗುಡ್ಸ್‌ನ್ನು ಯಾರಾದರೂ ಕದ್ದುಕೊಂಡು ಹೋದರೆ ಅದನ್ನು ಹಿಡಿಯುವ ಜವಾಬ್ದಾರಿ ಇವರಿಗೇ ಇರುವುದು. ಹೀಗಿರಬೇಕಾದರೆ ಅವರು ಅವರ ಜವಾಬ್ದಾರಿಯನ್ನ ನಿರ್ವಹಿಸಿದ್ದಾರೆಯೇ ಏನಹ ಅದಕ್ಕಾಗಿ ಅವರಿಗೆ ಅದರಲ್ಲಿ ಅರ್ಧ ಭಾಗ ಕೊಡುವುದು ಸರಿಯಲ್ಲ. ಯಾರಾದರೂ ಒಬ್ಬರು ಒಂದು ಪದಾರ್ಥವನ್ನು ಕದ್ದುಕೊಂಡು ಹೋದರೆ, ಅದನ್ನು ಕಂಡುಹಿಡಿಯುವ ಜವಾಬ್ದಾರಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿ ಇಟ್ಟಿರುವ ಈ

ಪೋಲೀಸ್ ಇಲಾಖೆಗೆ ಇದೆ, ಆಂಧ್ರಾದ್ದರಲ್ಲಿ ಆ ಫೈನಿನಲ್ಲಿ ಅವನಿಗೆ ಅರ್ಧ ಭಾಗ ಕೊಡಿ ಎಂದು ಹೇಳಿದರೆ, ಅವನ ಕೆಲಸದಮೇಲೆ ಒಂದು ಪ್ರಿಮಿಯಂ ಹಾಕಿದ ಹಾಗೆ ಆಗುತ್ತದೆ. ಅದು ತತ್ವಶಃ ತಪ್ಪು. ಪೋಲೀಸ್ ಅಧಿಕಾರಿಗಳಿಗೆ ಈ ತರಹ ಶಿಫಾರಸು ಮಾಡಿದರೆ, ಕಳ್ಳತನದ ಮಾಲನ್ನಲ್ಲಯೇ ವಿತಕ್ಕೆ ಅವರಿಗೆ ಅರ್ಧಪಾಲು ಕೊಡಬಾರದು ? ಎರಡು ಸೈಕಲ್‌ಗಳ ಕಳ್ಳತನ ಕಂಡುಹಿಡಿದರೆ ಆಗ ಒಂದು ಸೈಕಲ್ ಅವನಿಗೆ ಕೊಡಬಹುದು ಎಂದು ಹೀಗೆ ಕಳ್ಳತನದ ಮಾಲುಗಳಿಗೂ ಈ ರೂಲ್ಸ್ ಅನ್ವಯಿಸುವುದಾದರೆ, ಇದರಲ್ಲಿ ಏನು ಪ್ರಾಶಸ್ತ್ಯವಿದೆಯೋ ನನಗಂತೂ ಅರ್ಥವಾಗುತ್ತಾ ಇಲ್ಲ. ಇದರಲ್ಲಿ ವಿರೋಧಾಭಾಸ ಬಹಳ ಇದೆ. ಇನ್ನು ಮುಂದೆ ಪೋಲೀಸ್ ಅಧಿಕಾರಿಗಳು ಕಳ್ಳತನಗಳನ್ನು ಕಂಡುಹಿಡಿದರೆ, ಆ ಕಳ್ಳತನದ ಮಾಲುಗಳಲ್ಲಿ ಅರ್ಧ ಭಾಗವನ್ನು ಅವರಿಗೆ ಕೊಡಬೇಕೆಂಬುದಾಗಿ ತಿದ್ದುಪಡಿಯನ್ನು ತೆಗೆದುಕೊಂಡು ಬಂದರೂ ಬರಬಹುದು.

ದರೋಡೆ ಮಾಡಿದಂತಹ ಮಾಲು ಸಿಕ್ಕಿದರೆ ಅವಕ್ಕೆ ಸಂಬಂಧಪಟ್ಟ ಅಪರಾಧಿಗೆ ಮ್ಯಾಜಿಸ್ಟ್ರೇಟರು ಏನು ದಂಡವನ್ನು ವಿಧಿಸುತ್ತಾರೆಯೋ ಅದರಲ್ಲಿ ಅರ್ಧ ಭಾಗವನ್ನು ಆ ಮಾಲನ್ನು ಪತ್ತೆ ಮಾಡಿದಂತಹ ಪೋಲೀಸಿನವರಿಗೆ ಬಹುಮಾನವಾಗಿ ಕೊಡಬೇಕು ಎನ್ನುವಂಥ ಒಂದು ತಿದ್ದುಪಡಿ ಮಸೂದೆಯನ್ನು ಈಗ ಇಲ್ಲಿ ತೆಗೆದುಕೊಂಡು ಬಂದಿದ್ದಾರೆ. ಪೋಲೀಸ್ ಅಧಿಕಾರಿಗಳು ಯಾವರೀತಿ ನಡೆದುಕೊಳ್ಳುತ್ತಾರೆ, ಪೋಲೀಸು ಇಲಾಖೆಯಲ್ಲಿ ಕೆಲಸಕಾರ್ಯಗಳು ಯಾವರೀತಿ ನಡೆಯುತ್ತಿವೆ ಎಂಬುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಮಸೂದೆಯನ್ನು ಪೋಲೀಸ್ ಖಾತೆಯ ಮಂತ್ರಿಗಳು ತಂದರೆ ಜನ ಏನು ಹೇಳುತ್ತಾರೆಯೋ ಎಂದು ತಿಳಿದುಕೊಂಡು ಅನ್ಯ ವಿದ್ಯಾ ಉಪಮಂತ್ರಿಗಳು ಈ ಮಸೂದೆಯನ್ನು ತೆಗೆದುಕೊಂಡು ಬಂದಿದ್ದಾರೆ. ಇದು ನ್ಯಾಯವಲ್ಲ. ಇವೊತ್ತು ನಮಗೆಲ್ಲರಿಗೂ ಗೊತ್ತಿರುವ ಹಾಗೆ ಪೋಲೀಸ್ ಅಡ್ಮಿನಿಸ್ಟ್ರೇಷನ್ ನರಿಯಾಗಿಲ್ಲ. ಮೊನ್ನೆ ಬೆಂಗಳೂರಿನಲ್ಲಿಯೇ ರಾರ್‌ದಾಗ್ ಪಕ್ಕದಲ್ಲಿರತಕ್ಕ ಸಿದ್ದಾಪುರದಲ್ಲಿ ನಾಲ್ಕು ಜನ ಪೋಲೀಸಿನವರು ಸೇರಿಕೊಂಡು ಷೇಕ್ ಅಮೀರ್ ಎನ್ನುವವನನ್ನು ಕೊಂದು ಹಾಕಿದರು. ಇದು ತಮಗೆಲ್ಲರಿಗೂ ಗೊತ್ತಿದೆ. ಇದು ಪತ್ರಿಕೆಗಳಲ್ಲಿ ಕೂಡ ಬಂದಿದೆ. ಹೀಗೆಯೇ ಹಿಂದೆ ಮೈಯ್ಯಾಲಕಾವಲಿನಲ್ಲಿ ಪೋಲೀಸಿನವರು ಮುನಿಚಂದ್ರ ಎನ್ನುವವನನ್ನು ಪೋಲೀಸ್ ಸ್ಟೇಷನ್ನಿನಲ್ಲಿಯೇ ಕೊಂದು ಹಾಕಿದರು.

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಒಂದು ವಿಷಯವನ್ನು ಮಾನ್ಯ ಸದಸ್ಯರು ಗಮನಿಸಬೇಕು. ಈಗ ಇಲ್ಲಿ ಚರ್ಚೆ ಮಾಡತಕ್ಕದ್ದು ಗಿಫ್ಟ್ ಗುಡ್ಸ್‌ಗೆ ಸಂಬಂಧಪಟ್ಟ ಮಸೂದೆ. ಪೋಲೀಸ್ ಖಾತೆಗೆ ಸಂಬಂಧಪಟ್ಟ ವಿಷಯ ಇಲ್ಲಿ ಚರ್ಚೆ ಮಾಡುತ್ತಿಲ್ಲ. ಆದ್ದರಿಂದ ಆ ವಿಚಾರದಲ್ಲಿ ಹೆಚ್ಚು ಮಾತನಾಡುವ ಅವಶ್ಯಕತೆ ಇಲ್ಲ. ಈ ದೃಷ್ಟಿಯಿಂದ ಮಾನ್ಯ ಸದಸ್ಯರ ಟೀಕೆಗಳು ಇಲ್ಲಿ ಚರ್ಚೆಯಾಗತಕ್ಕ ಮಸೂದೆಗೆ ನಿರ್ದಿಷ್ಟವಾಗಿರಲಿ ಎಂದು ನಾನು ಹೇಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಇದರಲ್ಲಿ ಪೋಲೀಸ್ ಆಫೀಸರ ವಿಷಯ ಸೇರದೇ ಇದ್ದಿದ್ದರೆ ನಾನು ಈ ಮಾತುಗಳನ್ನು ಹೇಳುತ್ತಾ ಇರಲಿಲ್ಲ. ಪೋಲೀಸಿನವರಿಗೆ ಉತ್ತೇಜನವನ್ನು ಕೊಡುವುದಕ್ಕೋಸ್ಕರ ಅವರು ಕಳ್ಳತನ ಮಾಡಿದ ಮಾಲನ್ನು ಪತ್ತೆ ಹಚ್ಚಿದಾಗ ಆ ಸಂಬಂಧದಲ್ಲಿ ತಪ್ಪಿತಸ್ಥನಾದವನಿಗೆ ನ್ಯಾಯಾಧೀಶರು ಏನು ದಂಡವನ್ನು ವಿಧಿಸುತ್ತಾರೆಯೋ ಅದರಲ್ಲಿ ಅರ್ಧಭಾಗವನ್ನು ಕೊಡಬೇಕು ಎಂದು ಈ ಮಸೂದೆಯಲ್ಲಿ ಹೇಳಿವ್ವಾರೆ. ಇದರಲ್ಲಿ ಎಷ್ಟರ ಮಟ್ಟಿಗೆ ನ್ಯಾಯವಿದೆ ಎಂಬುದು ನನಗೆ ಅರ್ಥವಾಗುವುದಿಲ್ಲ. ಪ್ರಜಾಪ್ರಭುತ್ವದ ಆಡಳಿತದಲ್ಲಿ ಈ ರೀತಿ ಆದರೆ ಇದು ಆಡಳಿತದ ಸಡಿಲತೆಯನ್ನು ತೋರಿಸುತ್ತದೆ. ಆಡಳಿತದಲ್ಲಿ ಸ್ವಲ್ಪ ಬಿಗಿ ಇದ್ದರೆ ಪೋಲೀಸಿನವರು ತಮ್ಮ ಕರ್ತವ್ಯವನ್ನು ನರಿಯಾಗಿ ನಿರ್ವಹಿಸುತ್ತಾರೆ. ಈಗಾಗಲೇ ನಮಗೆ ತಿಳಿದಹಾಗೆ ಪೋಲೀಸ್ ಸ್ಟೇಷನ್ನಿಗೆ ಎಷ್ಟೋ ಮಾಮೂಲುಗಳು ಬರುತ್ತವೆ. ಕಳ್ಳಬಟ್ಟಿ ಸಾರಾಯಿಯಿಂದ ಪೋಲೀಸಿನವರಿಗೆ ಎಷ್ಟೋ ಮಾಮೂಲುಗಳು ಬರುತ್ತವೆ. ಯಶವಂತಪುರದ ಪೋಲೀಸ್ ಸ್ಟೇಷನಿಗೆ 2 ಸಾವಿರ ರೂಪಾಯಿಗಳಿಂದ 3 ಸಾವಿರ, 5 ಸಾವಿರ ರೂಪಾಯಿಗಳ ಮಾಮೂಲು ಒಂದೊಂದು ತಿಂಗಳಿಗೆ ಬರುತ್ತದೆ. ಇಂಥಾದ್ದರಲ್ಲಿ ಕಳ್ಳತನದ ಮಾಲನ್ನು ಪೋಲೀಸಿನವರು ಪತ್ತೆ ಹಚ್ಚಿದಾಗ ಅಪರಾಧಿಗೆ ಮ್ಯಾಜಿಸ್ಟ್ರೇಟರು ದಂಡವನ್ನು ವಿಧಿಸಿದಾಗ ಆ ದಂಡದಲ್ಲಿ ಅರ್ಧಭಾಗವನ್ನು ಆ ಪೋಲೀಸಿನವರಿಗೆ ಕೊಡಬೇಕು ಎಂದರೆ ಇದು ಯಾವ ನ್ಯಾಯ ! ಇದು ನರಿಯಾದ್ದಲ್ಲ. ಇದಕ್ಕೆ ಉತ್ತೇಜನ ಕೊಡಬೇಡಿ. ಅವರಿಗೆ ಏತಕ್ಕೆ ಆ ರೀತಿ ಬಹುಮಾನವನ್ನು ಕೊಡಬೇಕು ! ಕಳ್ಳತನವಾದಂಥಾದ್ದನ್ನು ಕಂಡುಹಿಡಿಯುವುದು ಪೋಲೀಸಿನವರ ಕರ್ತವ್ಯ. ಅದು ಅವರ ಜವಾಬ್ದಾರಿ. ಸಾರ್ವಜನಿಕರು ಏನಾದರೂ ಇಂಥಾದ್ದಕ್ಕೆ ಸಹಾಯ ಮಾಡಿದರೆ ಅಂಥಾದ್ದನ್ನು ಮೂರೆಗೆ ಹಾಕುತ್ತಿದ್ದಾರೆ. ಇದು ತಮಗೆ ಗೊತ್ತಿದೆ. ಈ ಗಿಫ್ಟ್ ಗುಡ್ಸ್‌ಗೆ ಸಂಬಂಧಪಟ್ಟಂಥ ಪದಾರ್ಥಗಳಾದ ಕಾರ್ನ್ ಮೀಲ್, ವಿಜಿಟೇಬಲ್ ಆಯಿಲ್, ಬಟ್ಟರ್, ಗೀ, ಇದು ಅಮೇರಿಕದ ಕೇರ್ ಸಂಸ್ಥೆಯವರು ಕೊಡುತ್ತಾರೆ.

(ಶ್ರೀ ಎಂ. ಎಸ್. ಕೃಷ್ಣನ್)

ಬೇಕಾದಷ್ಟು ಹಾಲಿನ ಪೌಡರ್ ಕೊಡುತ್ತಾರೆ, ಅದಲ್ಲದೆ, ಬೇರೆ ರೀತಿಯ ಹಾಲೂ ಕೊಡುತ್ತಾರೆ. ಇದೆಲ್ಲಾ ಬ್ಲಾಕ್ ಮಾರ್ಕೆಟಿಗೆ ಹೋಗುತ್ತಿದೆ; ಹೋಟಲುಗಳಿಗೆ ಹೋಗುತ್ತಿದೆ. ಅವರಿಗೆ ಕೊಡುವವರು ಯಾರು? ಅದು ಕೆಲವು ಸಂಸ್ಥೆಗಳ ಮೂಲಕ ಹೋಗುತ್ತದೆ. ಆದರೆ ಎಲ್ಲಾ ಸಂಸ್ಥೆಗಳು ಕೆಟ್ಟ ದಾರಿಯಲ್ಲಿ ಹೋಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಕೆಲವರು ಆ ರೀತಿ ಮಾಡುತ್ತಿದ್ದಾರೆ. ತಾವೇ ನೇರವಾಗಿ ಕೊಡುವುದಕ್ಕಾಗುವುದಿಲ್ಲ. ಏಜೆಂಟರುಗಳನ್ನು ಇಟ್ಟಿದ್ದಾರೆ. ಪೋಲೀಸಿನವರೂ ಅದರಲ್ಲಿ ಇದ್ದಾರೆ. ಹೀಗೆ ಇರಬೇಕಾದರೆ, ಅವರಿಗೆ ಅರ್ಧ ಫೈನ್ ಕೊಟ್ಟುಬಿಡಿ ಅಂದರೆ, ಏನು ನ್ಯಾಯ? ಜನರು ಯಾರಾದರೂ ಸಹಕಾರ ನೀಡಲಿಕ್ಕೆ ಬಂದರೆ, ಹಾಲು, ತುಪ್ಪ, ಬೆಣ್ಣೆ ಯಾರಿಗೆ ಸೇರಬೇಕೋ, ಅವರಿಗೆ ಸೇರದೆ, ಈ ರೀತಿಯಲ್ಲಿ ಅನ್ಯಾಯವಾಗುತ್ತಿದೆ. ಜನರಿಗೆ ಫೈನಿನಲ್ಲಿ ಅರ್ಧ ಭಾಗ ಕೊಡಿ ಅಂದರೆ ಅದು ಬೇರೆ ವಿಷಯ. ಈ ದೃಷ್ಟಿಯಿಂದ ನಾನು ಈ ತಿದ್ದುಪಡಿಯನ್ನು ಪ್ರಬಲವಾಗಿ ವಿರೋಧಿಸುತ್ತೇನೆ. ಇದನ್ನು ವಾಪಸ್ಸು ತೆಗೆದುಕೊಂಡರೆ ದೇಶಕ್ಕೂ ಒಳ್ಳೆಯದು, ನಿಮಗೂ ಒಳ್ಳೆಯದು ಮತ್ತು ನಮಾಜಕ್ಕೂ ಒಳ್ಳೆಯದು ಎಂದು ಮಾತ್ರ ಹೇಳಬಲ್ಲೆ. ಇಷ್ಟು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಚ್. ಎನ್ ನಂಜೇಗೌಡ.—ಮಾನ್ಯ ಸಭಾಧ್ಯಕ್ಷರೇ, ಈ ಬಿಲ್ಲನ್ನು ಎರಡು ಕಾರಣ ದಿಂದ ವಿರೋಧಿಸುತ್ತೇನೆ. ಒಂದು ಇಂಥ ಕಾನೂನು ಮಾಡತಕ್ಕದ್ದೂ ನಾಚಿಕೆಗೇಡು. ಎರಡನೆ ಯದು, ಇದು ವಾಸ್ತವಿಕತೆಗೆ ಬಹಳ ದೂರ ಎನ್ನುವುದು. ಇಂಥ ಕಾನೂನು ಅಪ್ರಾಕ್ಟಿಕ್. ಕೇರ್ ಸಂಸ್ಥೆಯವರು ಕೊಟ್ಟ ಈ ಸಹಾಯವನ್ನು ಶಾಲಾ ಮಕ್ಕಳಿಗೆ ಹಂಚುವಾಗ ಕೆಲವೊಂದು ಭಾಗವನ್ನು ಕಳ್ಳಮಾರಾಟ ಮಾಡಿಕೊಳ್ಳುತ್ತಾರೆ. ಅಷ್ಟು ಮಟ್ಟಿಗೆ ನಮ್ಮ ನೈತಿಕ ಮಟ್ಟ ಇಳಿದಿದೆ. ಈ ಪ್ರಜಾ ರಾಜ್ಯದಲ್ಲಿ ಇಂದು ಹೇಳುವುದಾದರೆ ಇದು ನಾಚಿಕೆಗೇಡಿನ ವಿಷಯ. ಎರಡನೆಯದಾಗಿ, ಈ ತಿದ್ದುಪಡಿ ಯನ್ನು ತಂದಂತಹ ಉಪಮಂತ್ರಿಯವರು ಈ ಮಸೂದೆಯನ್ನು ವಸ್ತುತಃ ಅರ್ಥ ಮಾಡಿಕೊಂಡ ಹಾಗೆ ಕಾಣುವುದಿಲ್ಲ. ಪೋಲೀಸಿನವರಿಗೆ ಹಿಡಿಯುವುದಕ್ಕೆ ಇರುವ ಅವಕಾಶ ಬಹಳ ಕಡಿಮೆ. ಏಕೆಂದರೆ, ಗಿಫ್ಟ್ ಗೂಡ್ಸನ್ನು ಸಾಮಾನ್ಯವಾಗಿ ಉಪಾಧ್ಯಾಯರಿಗೆ ಕೊಡುತ್ತಾರೆ. ಉಪಾಧ್ಯಾ ಯರು ಅದನ್ನು ತೆಗೆದುಕೊಂಡು ಹೋಗಿ ಸ್ಕೂಲಿನಲ್ಲಿ ಇಡುವುದಕ್ಕಾಗುವುದಿಲ್ಲ. ಯಾವುದಾದರೂ ಮನೆಯಲ್ಲಿ ಇಡಬೇಕು. ಸ್ಟೋರ್ಸ್ ರೂಮು ಕಟ್ಟಿಕೊಡಲು ಸಾಧ್ಯವಿಲ್ಲ.

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ರೆಂಟೆಡ್ ಗೋಡೌನ್ಸ್ ಇವೆ. 10 ಗೋಡೌನ್ಸ್ ಕಟ್ಟುತ್ತಿದ್ದೇವೆ.

ಶ್ರೀ ಎಚ್. ಎನ್. ನಂಜೇಗೌಡ.—ಹಳ್ಳಿಯ ಸಂಪರ್ಕ ನನಗೆ ಜಾಸ್ತಿ ಇದೆ. ಆದ್ದರಿಂದ ನಾನು ಧೈರ್ಯವಾಗಿ ಹೇಳಬಲ್ಲೆ, ಇದನ್ನು ಮನೆಯಲ್ಲಿ ಇಡುತ್ತಾರೆ. ಆದ್ದರಿಂದ ಇದನ್ನು ಯಾರ ಮನೆಯಲ್ಲಿಡಬೇಕು? ಗಿಫ್ಟ್ ಗೂಡ್ಸನ್ನು ಈ ರೀತಿ ಯಾರ ಮನೆಯಲ್ಲೋ ಇಟ್ಟರೆ, ಮಂಜೆ ಶಿಕ್ಷೆ ಕೊಡುವುದಕ್ಕೆ ಅವಕಾಶವಾಗುತ್ತದೆ. ಪಂಚಾಯತಿ ಮುಖಾಂತರ ಕೆಲವು ಸಂದರ್ಭಗಳಲ್ಲಿ ಬಿಸ್ಕಿಟ್ ಬಾಕ್ಸ್ ಅರ್ಧ ಪೌಂಡ್, ಕಾಲು ಪೌಂಡ್ ಹಂಚಿದರು. ಇದನ್ನು ಮನೆಯಲ್ಲಿ ಇಟ್ಟುಕೊಂಡರೂ, ಒಂದು ದಿವಸದಲ್ಲಿ ಹಂಚಿ ಮುಗಿಸುವುದು ಅಪರೂಪ. ಸ್ಯಾಂಪರ್ ಇರಲಿ ಎಂದು ಇಟ್ಟುಕೊಳ್ಳುವವರೂ ಇರುತ್ತಾರೆ, ಕಾಫಿಗಾಗಲಿ ಎಂದು ಇಟ್ಟುಕೊಳ್ಳುವವರೂ ಇರುತ್ತಾರೆ. ಆಗ ಸಂದರ್ಭ ದಲ್ಲಿ ಅದು ಅನ್‌ಲಾಫುಲ್ ಪೊಸೆಶನ್ ಆಗುತ್ತದೆ. ಈ ಪರಿಸ್ಥಿತಿಯನ್ನು ಸರ್ಕಾರ ಅರ್ಥಮಾಡಿ ಕೊಂಡಿಲ್ಲ. ಈಗ ವಿದ್ಯಾ ಇಲಾಖೆಯನ್ನು ತೆಗೆದುಕೊಂಡರೆ ಸ್ಕೂಲ್ ಇನ್ಸ್‌ಪೆಕ್ಟರ್ ಅವರೇ ಈ ಸಾಮಾನುಗಳನ್ನು ಇಟ್ಟುಕೊಂಡಿರುತ್ತಾರೆ. ಅವರು ಪ್ರತಿ ಸ್ಕೂಲಿಗೆ ಹಂಚುವಾಗ ಕಡಿಮೆ ಕೊಟ್ಟು ಜಾಸ್ತಿ ಸಾಮಾನುಗಳಿಗೆ ಇಂಡೆಂಟ್ ತೆಗೆದುಕೊಳ್ಳುವುದಕ್ಕೆ ಅವಕಾಶವಿದೆ. ಇವರ ಕೈಕೆಳಗೆ ಉಪಾ ಧ್ಯಾಯರುಗಳು ಕೆಲಸ ಮಾಡುವುದರಿಂದ ಅವರು ಏನೂ ಮಾಡುವುದಕ್ಕಾಗುವುದಿಲ್ಲ. ಎನ್.ಇ.ಎಸ್. ಇಲಾಖೆಯಲ್ಲಿ ಈ ಸಾಮಾನುಗಳನ್ನು ಗ್ರಾಮಸೇವಕರ ಮೂಲಕ ಹಂಚಲಾಗುತ್ತದೆ. ನಮ್ಮ ಭಾಗದಲ್ಲಿ ಒಬ್ಬ ಚೇರ್‌ಮನ್ ಅವರು 480 ಕೆ.ಜಿ. ಹಾಲಿನ ಪುಡಿಯನ್ನು ಹಗಲನಲ್ಲಿಯೇ ಮಾರಾಟ ಮಾಡುವುದಕ್ಕೆ ಹೋದ ಸಮಯದಲ್ಲಿ ನಾನೇ ಹಿಡಿದು ಅಲ್ಲಿಯ ಗ್ರಾಮಸ್ಥರಿಂದ ಮಹಜರ್ ನಡೆಸಿ ಕ್ರಮ ತೆಗೆದುಕೊಳ್ಳುವ ಬಗ್ಗೆ ಹಿಂದಿನ ಆಹಾರದ ಮಂತ್ರಿಗಳಿಗೆ ಕಳಿಸಿದ್ದೆ. ಆದರೆ ಅವರಿಗೆ ಆಕ್ಷನ್ ತೆಗೆದುಕೊಳ್ಳುವುದಕ್ಕಾಗಲಿಲ್ಲ. ಫೈನ್ ಹಾಕಿದ್ದರಲ್ಲಿ ಒಂದು ಪಾಲನ್ನು ಯಾರು ಕಂಡುಹಿಡಿದಿರು ತ್ತಾರೋ ಅವರಿಗೆ ಕೊಡುತ್ತೇವೆ ಎಂದು ಹೇಳುವುದಾದರೆ ಅರಣ್ಯ ಇಲಾಖೆಯಲ್ಲಿರುವ ಅಧಿಕಾರಿ ಗಳಿಗೆ ನೂರಾರು ಕೇಸ್‌ಗಳನ್ನು ಕಂಡುಹಿಡಿಯುವುದಕ್ಕೆ ಅವಕಾಶವಿರುತ್ತದೆ. ಈ ಒಂದು ತಿದ್ದುಪಡಿ ಯನ್ನು ಆ ಇಲಾಖೆಗೂ ಅನ್ವಯ ಮಾಡುವುದಾದರೆ ಅಲ್ಲಿ ಅವರಿಗೂ ಫೈನ್‌ನ ಒಂದು ಭಾಗವನ್ನು

ಕೊಡಬೇಕಾಗುತ್ತದೆ. ಈ ರೀತಿ ಮಾಡುವುದರಿಂದ ಪೊಟೆಪೇಟ್ ಮಾಡಿದಂತಾಗುತ್ತದೆ. ನಾಳೆ ದಿವಸ ಈ ಬಗ್ಗೆ ನಾನು ಕೂಡ ಒಂದು ತಿದ್ದುಪಡಿಯನ್ನು ತರಬೇಕೆಂದಿದ್ದೇನೆ. ಏಕೆಂದರೆ ಈಗ ತಂದಿರುವ ತಿದ್ದುಪಡಿ ನಾಚಿಕೆಗೇಡಿನ ತಿದ್ದುಪಡಿ ಎಂದು ನಾನು ಮೊದಲೇ ಹೇಳಿದ್ದೇನೆ. ಇದನ್ನು ಸರ್ಕಾರದವರು ಒಪ್ಪಿಕೊಂಡರೆ ನೈತಿಕಪತನವನ್ನು ಮಪ್ಪಿಕೊಂಡ ಹಾಗೆ ಆಗುತ್ತದೆ. ಅನಗತ್ಯವಾಗಿ ಈ ಒಂದು ಕ್ಷೇತ್ರದಲ್ಲಿ ಮಾತ್ರ ಈ ರೀತಿ ಫೈನ್ ಹಾಕಿ ಅದರಲ್ಲಿ ಒಂದು ಭಾಗವನ್ನು ಕಂಡು ಹಿಡಿದವರಿಗೆ ಕೊಡುತ್ತೇವೆಂದು ಹೇಳುವುದು ಸರಿಯಲ್ಲ. ಈ ಒಂದು ನೀತಿಯನ್ನು ಎಲ್ಲಾ ಇಲಾಖೆಗಳಿಗೂ ಸಹ ಅನ್ವಯಿಸುವುದಾದರೆ ನಾವು ಎಲ್ಲಿಗೆ ಹೋಗಿ ಮುಟ್ಟುತ್ತೇವೆ ಎಂಬುದು ಗೊತ್ತಾಗುತ್ತಿಲ್ಲ. ಈ ತಿದ್ದುಪಡಿಯನ್ನು ಪಾಸ್ ಮಾಡಿದರೆ ನಮ್ಮ ನೈತಿಕ ಮಟ್ಟ ಪತನವಾಗಿದೆ ಎಂಬುದು ಪ್ರಪಂಚಕ್ಕೇ ಗೊತ್ತಾಗುತ್ತದೆ. ಈ ರೀತಿ ಆಗಬಾರದು. ಈಗ ತಂದಿರುವ ತಿದ್ದುಪಡಿಯನ್ನು ಮಾನ್ಯ ಉಪ ಮಂತ್ರಿಗಳು ವಾಪಸ್ ತೆಗೆದುಕೊಂಡು ಮೂಲ ಮಸೂದೆಯನ್ನು ರಿಪೀಲ್ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

3-30 P.M.

† **Sri D. B. KALMANKAR** (Aland).—Mr. Speaker, Sir, the gift goods under the Mysore Gift Goods (Unlawful Prossession) (Amendment), Bill 1968, are corn-meal, milk powder, vegetable oil, butter and ghee, and these are given by way of gift by the International Organisations like UNICEF, CARE, World Health Services, Catholic Relief Services, etc. Government has got powers to remove some organisations and add some other organisations which play the role of benefactors to our State or the Central Government. Under section 2, these articles are either supplied to the Central Government or the State Government or to any person on behalf of the Government. As it was rightly pointed out by my hon. friend Sri H. N. Nanje Gowda, it is very difficult to say whether it is lawful possession or unlawful possession unless the lawful custodian is specified. Take the instance of a teacher. In rural areas, as we all know, supposing the Inspector of Schools wants to involve an ordinary primary school teacher, who does not pay him any mamool, etc., he will try to trap him saying that he is in possession of these articles, which ought to be in the school premises. Usually, in rural area schools, sufficient space will not be there to store these articles. Suppose the teacher puts those articles in his possession for safe custody and if the Inspector is not on good terms with him, he tries somehow to book the poor teacher by taking advantage of the provisions under this Act, and the poor teacher is booked for no fault of his. There is no specific provision to say as to who is put in lawful possession of the articles and in whom these powers must be vested.

The original Act consists only of six sections; section 2 deals with definitions, section 3 with penalty, only section 4 with offences under the Act, section 5 with Cognisance of offences, and section 6 with power to amend the schedule, etc. Now, there are some amendments by the Hon. Minister. But, nowhere is it mentioned that a particular person is a lawful custodian. It should have been definitely stated as to who is said to be a person possessing these articles. Without that, I submit that the whole Act is ambiguous. I do not know how this Act was passed in 1963 and how amendments could be brought today. Neither the Inspector of Schools is stated to be the person responsible

(SRI D. B. KALMANKAR)

to possess these articles at the Taluk level, the District Educational Officer at the District level or the Deputy Director of Public Instruction at the divisional level. Nowhere is it stated who is the lawful custodian of these articles. As far as school buildings are concerned, in our State, when we put questions, the answer given is that for want of funds the work could not be taken up. When such is the condition, it will be too much to assume that there are store rooms provided in the schools to store these articles, as far as rural areas are concerned. These articles are primarily meant to cater to the needs of those boys and girls who are economically backward and who reside particularly in rural areas. As I stated earlier, in almost all places, the Inspector will be at logger heads with the poor teacher, for which there are many reasons, communal, regional or other reasons. This will be a very good ground for him to book any person and punish the person, who does not act according to his whims and fancies. Sir, I can say without fear or favour that many of these articles are found in the open market. The shop-keepers and others are always found dealing in such articles. May I ask, what action your Police has taken so far? Is it not possible for them to go and raid the shop, where these articles are found, and take action confiscate the property and file a charge sheet against them? They can do it. But, there are links, there are interests. These people, who take the articles, from the teachers or persons in possession of the articles, sell them at a higher price in the open market. My submission is, that the Police, as it is, is not vigilant, they are not at all interested in detecting such offences. If the Government is of the opinion that these articles should not be stolen, what prevents the police officers from taking cognizance of such offences in the Court of Law? I feel that there is no need to give any special incentive to the police officers. If you agree in principle to give something by way of incentive to do their legitimate duties, I am afraid the time is not far off when the Clerks and other officials will also claim as a right that they must also be given something more than what is due to them under the conditions of service. So, it is a very bad path that we are treading, and I submit that this amendment is an insult to the Police.

Today, I asked a question about a Circle Inspector of Police. A person, who was acquitted in a case, and who comes out along with his colleagues, was again taken to the Police Station, beaten and he died in the lock-up. The other persons, who were with him, thinking that they might reveal the facts, were taken to some other Police Station. Thereafter, the dead body was taken to the village by the Circle Inspector, 3 Sub-Inspectors and 25 Police Constables, and at the point of Pistol, they asked the villagers to allow them to cremate the dead body. But the villagers, who are courageous, never acceded to the demand, and the villagers got the dead body buried in their place. Thereafter, a Panchanama is made. Do the Police officers deserve any sympathy for

such acts of omissions and commissions? To such people, the Government wants to give something more by way of an incentive. I fail to understand why they need any special incentive? I can understand if you give incentive to those persons who come forward risking their lives to give you information regarding the occurrence of the offence. If you say that we want to give something by way of incentive to some persons who are intersted in finding out the truth then also, I agree. But as far as police officers are concerned, my submission is that we should not develop practices of giving incentives and if we develop this, we would be giving a legal sanctity for things which we should not allow. Therefore my humble submission is that this particular amendment Bill must be taken back. Not only that, I would also request the Hon. Minister to think over this problem in all its aspects. I once again request and appeal to the Hon. Minister to withdraw this Bill. With these words, I thank the Hon. Chair and conclude.

† ಶ್ರೀ ಸಿ. ಕೆ. ರಾಜಯ್ಯ ಕೆಟ್ಟಿ (ಚಿಕ್ಕನಾಯಕನಹಳ್ಳಿ).—ಮಾನ್ಯ ಸಭಾಪತಿಗಳೇ, ಈಗ ತಂದಿರುವ ವಿಧೇಯಕಕ್ಕೆ ತಿದ್ದುಪಡಿ ತಂದಿರುವುದನ್ನು ನೋಡಿದರೆ ಇದಕ್ಕೆ ಸರ್ಕಾರದವರು ಪ್ರಾತಸನ್ಯ ಕೊಟ್ಟಿರುವುದಕ್ಕೆ ನಾನಾದರೂ ಹೇಳುತ್ತೇನೆ, ಈಪೊತ್ತಿನ ದಿವಸ ಪ್ರಪಂಚದ ಅನೇಕ ನಂಸ್ಥೆಗಳು ನಮಗೆ ಒದಗಿಸಿರುವ ವಸ್ತುಗಳು ಏನು ಇವೆಯೋ ಅವು ಯಾವರೀತಿ ದುರುಪಯೋಗ ವಾಗಿವೆ, ಇವರು ಹಾಕಿರುವ ಕೇಸುಗಳು ಇದುವರೆಗೆ ಎಷ್ಟು, ಎಂದು ಲೆಕ್ಕ ಹಾಕಿಕೊಂಡು ನೋಡಿದರೆ ಒರಿಜಿನಲ್ ವಿಧೇಯಕ ಏನು ಇದೆಯೋ ಅದು ನತ್ತು ಹೋಗಿದೆ ಎಂದು ಹೇಳುತ್ತೇನೆ. ಅನೇಕವೇಳೆ ಹಿಡಿದಂಥ ಕೇಸುಗಳನ್ನು ಸರ್ಕಾರದವರು ಏನೂ ಕಾರ್ಯಕ್ರಮ ತೆಗೆದುಕೊಳ್ಳದೆ ಕೈಬಿಟ್ಟಿದ್ದಾರೆ. ಭಾರತ ಸೇವಕ ಸಮಾಜದವರಿಗೆ ಕೊಟ್ಟಿದ್ದ ಹತ್ತಾರು ಸಾವಿರ ರೂಪಾಯಿ ಬೆರೆ ಬಾಳುವ ಹಾಲಿನಪುಡಿ ಬ್ಲಾಕ್ ಮಾರ್ಕೆಟ್‌ಗೆ ಹೋಗಿರುವುದು ನನ್ನ ಗಮನಕ್ಕೆ ಬಂದಿದೆ. ಈ ಆಕ್ಟಿಗೆ ಈ ಮನೆಯ ಮುದ್ರಣ ಇದೆಯೇ ಹೊರತು, ನಿಜವಾಗಿಯೂ ಇದನ್ನು ಅನುಸರಿಸಿ ಹೆಚ್ಚು ಕೇಸು ಹಾಕುವುದೂ ಇಲ್ಲ ಮತ್ತು ಯಾವ ಕ್ರಮವನ್ನೂ ಇದುವರೆಗೆ ತೆಗೆದುಕೊಂಡಿಲ್ಲ. ಆದುದರಿಂದ ಈ ಗಿಫ್ಟ್ ಗೂಡ್ಸ್ ಮೇಲೆ ಸರ್ಕಾರದ ಒಂದು ಹತೋಟಿ ಇಲ್ಲವೆಂದು ಹೇಳಬಹುದು. ಕೇರ್ ಸಂಸ್ಥೆ ಯವರು ನಮಗೆ ಕೊಟ್ಟಿರುವ ಗಿಫ್ಟ್ ಗೂಡ್ಸ್ ಎಂದರೆ ಕಾರನ್ ಮೀಲ್, ಹಾಲಿನಪುಡಿ, ಎಣ್ಣೆ, ಬೆಣ್ಣೆ, ತುಪ್ಪ ಇಷ್ಟು ಮಾತ್ರ. ಇವೆಲ್ಲಾ ದುರುಪಯೋಗವಾಗುತ್ತಾ ಇವೆ. ಇದಕ್ಕೆ ಬೇರೆ ರೀತಿ ಯಾಗಿ ಏನಲ್ಲಾ ವಿಟಾಮಿನ್ಸ್ ಪ್ರಾಡಕ್ಟ್ಸ್ ಫುಡ್ ಎಂದು ಮಾಡಿ ಕಳ್ಳತನವನ್ನು ಬಹಿರಂಗಪಟ್ಟಿಗೆ ಕಡಿಮೆ ಮಾಡಿದ್ದೇವೆ ಎಂದು ಹೇಳುತ್ತಾರೆ. ಪರದೇಶದಿಂದ ಬರುವುದು ಇದೊಂದೇ ಪದಾರ್ಥವಲ್ಲ. ಇನ್ನೂ ಅನೇಕ ಪದಾರ್ಥಗಳು ಬರುತ್ತವೆ. ಡ್ರಗ್ಸ್‌ಗಳೂ ಕೂಡ ಅನೇಕ ಬರುತ್ತವೆ. ಅವು ಪ್ರತಿ ಯೊಂದು ಆಸ್ಪತ್ರೆಗೆ ಹೋಗದೆ ಕಳ್ಳತನವಾಗುತ್ತಾ ಇದೆ. ಬಟ್ಟೆಗಳು, ಪುಸ್ತಕಗಳು, ಸ್ಲೇಟು ಗಳು ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನವರು ಕೊಡುತ್ತಾ ಇದ್ದಾರೆ, ಅದು ಕಳ್ಳತನ ವಾಗುತ್ತಾ ಇದೆ. ಆದುದರಿಂದ ದೇಶದಲ್ಲಿ ಎಲ್ಲವೂ ದುರುಪಯೋಗವಾಗುತ್ತಾ ಇದೆ. ಅದ್ದರಿಂದ ಈ 5 ಪದಾರ್ಥಗಳನ್ನು ಲೆಕ್ಕ ಹಾಕಿಕೊಂಡು ಇದನ್ನು ಹತೋಟಿಗೆ ತರಬೇಕೆನ್ನುವುದು ಸರಿಯಲ್ಲ. ಇದುವರೆಗೆ ಹಾಕಿರುವ ಕೇಸುಗಳ ಮೇಲೆ ಸರ್ಕಾರದವರು ಏನು ಒಂದು ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ. ಈಪೊತ್ತಿನ ದಿವಸ ನಮ್ಮ ಸ್ನೇಹಿತರು ಹೇಳಿದರು ಬಿಳಿಗೆರೆ ಬಂದು ಗ್ರಾಮದಲ್ಲಿ ಒಬ್ಬ ಹೆಡ್‌ಮಾಸ್ಟರ್ ಹಾಲಿನ ಪುಡಿಯನ್ನು ತಪಟೂರಿನಲ್ಲಿ 3½ ಸಾವಿರ ರೂಪಾಯಿಗೆ ಬ್ಲಾಕ್ ಮಾರ್ಕೆಟ್‌ನಲ್ಲಿ ಮಾರುತ್ತಾ ಇದ್ದುದನ್ನು ಹಿಡಿದಿದ್ದಾರೆ. ಪೋಲೀಸಿನವರು ಇನ್‌ವೆಸ್ಟಿಗೇಷನ್ ಕೂಡ ಮಾಡಿದರು. ಮಹಜರ್ ಮಾಡಿ 2½ ವರ್ಷ ವಾಯಿತು. ಛಾರ್ಜ್‌ಷೀಟ್ ಇದುವರೆಗೂ ಹಾಕಿಲ್ಲ. ಆದುದರಿಂದ ಕಾನೂನಿಗೆ ಹೊಸತಿದ್ದುಪಡಿ ಮಾಡಿ ತಪ್ಪಿತಸ್ಥರನ್ನು ಕೋರ್ಟ್‌ಗೆ ಎಳೆಯು ತ್ತೇವೆ ಎನ್ನುವುದರಲ್ಲಿ ಅರ್ಥವಿಲ್ಲ. ಈಗ ಇರುವ ಕಾನೂನಿನಲ್ಲೇ ಸಾಕಷ್ಟು ಅವಕಾಶವಿದೆ. ಪೋಲೀಸಿನವರಿಗೆ ಲಂಚ ಕೊಟ್ಟು ಹಿಡಿಸುತ್ತೇವೆ ಎಂದು ಈ ಒಂದು ಅಮೆಂಡ್‌ಮೆಂಟ್ ತಂದಿರುವ ಉದ್ದೇಶ ಏನು? ಈಗ ಇರುವ ಶಾಸನದಲ್ಲೇ ಅಧಿಕಾರ ಕೊಟ್ಟಿದೆ. ಪೋಲೀಸಿನವರು ಇರುವುದು ಕಳ್ಳತನವನ್ನು ಪತ್ತೆ ಮಾಡಿ ಬಲಿಹಾಕುವುದಕ್ಕೋಸ್ಕರವೇ. ತಮ್ಮ ಕೆಲಸವನ್ನು ಲಂಚ ತೆಗೆದು ಕೊಂಡು ಮಾಡುತ್ತೇವೆ ಎಂದು ಹೇಳುವುದು ಬಹಳ ಅವಮಾನಕರವಾದುದು. ಸರ್ಕಾರ ಈರೀತಿ

(ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ)

ಮಾಡಬಾರದು. ಸ್ಮಗ್ಲರ್‌ನವರೇ ಆಗಲಿ, ಯಾರೇ ಆಗಲಿ ಕಳ್ಳತನ ಮಾಡಿದರೆ ಶಿಕ್ಷೆ ಮಾಡುವ ಅಧಿಕಾರ ಸರ್ಕಾರಕ್ಕೆ ಇದೆ. ಅದುಬಿಟ್ಟು, ಈ ಒಂದು ಅಮೆಂಡ್‌ಮೆಂಟ್ ತಂದು ಇದರಿಂದ ಕಳ್ಳ ತನವನ್ನು ಹಿಡಿಯುವುದಕ್ಕೆ ಹೆಚ್ಚಿಗೆ ಅನುಕೂಲವಾಗುತ್ತದೆ ಎಂದು ಹೇಳಿ ಪೋಲೀಸಿನವರಿಗೆ ಬಹುಮಾನ ಕೊಡುವುದು ಸರಿಯಲ್ಲ ಎಂದು ಹೇಳಬೇಕಾಗಿದೆ. ಬರೀ ವಿಧೇಯಕದಿಂದ ಏನೂ ಪ್ರಯೋಜನವಾಗುವುದಿಲ್ಲ. ಇದರಲ್ಲಿ ಶ್ರೀಮಂತರ ಹನ್ತಕ್ಷೇಪ ಇರಬಾರದು ಎಂದು ಮಾಡಿದರೆ ಆಗ ಸರಿಯಾಗಿ ನಡೆಯಬಹುದು. ಹತ್ತಾರು ಸಾವಿರ ರೂಪಾಯಿಗಳ ಬೆಲೆ ಬಾಳುವ ಹಾಲಿನಪುಡಿ ಬ್ಲಾಕ್‌ಮಾರ್ಕೆಟ್‌ಗೆ ಹೋಗಿದ್ದರೂ ಭಾರತ ಸೇವಕ ಸಮಾಜದವರ ಮೇಲೆ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಇನ್ನು ಯಾವ ಹೊಸ ವಿಧೇಯಕ ತಂದರೂ ಕೂಡ ಎಲ್ಲಾ ಕಾಗದದ ಮೇಲೆ ಇರುತ್ತದೆಯೇ ಏನಃ ಆದರಿಂದ ಯಾವ ಪ್ರಯೋಜನವೂ ಆಗುವದಿಲ್ಲ. ಆದುದರಿಂದ ಈ ವಿಧೇಯಕಕ್ಕೆ ತಂದಿರುವ ತಿದ್ದುಪಡಿ ಏನು ಇವೆ ಅದು ಸರಿಯಲ್ಲ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎನ್. ಎ. ಚನ್ನೇಗೌಡ (ಪಾಂಡವಪುರ).—ಸನ್ಮಾನ್ಯ ಸಭಾಧ್ಯಕ್ಷರೇ, ಈ ಮಸೂದೆ ತಂದಿರುವ ಉದ್ದೇಶ ನೋಡಿದರೆ ನಮ್ಮಲ್ಲಿ ಪೋಲೀಸಿನವರಿಗೆ ಸಂಬಳದ ಜೊತೆಗೆ ಬಹುಮಾನವನ್ನು ಕೊಟ್ಟು ಕೆಲಸ ಮಾಡಿಸುವುದಾದರೆ ಈ ಪೋಲೀಸ್ ಇಲಾಖೆ ಇಟ್ಟಿರುವುದು ಏತಕ್ಕೆ ? ರಾಜ್ಯದಲ್ಲಿ ನಡೆಯತಕ್ಕಂಥ ಅನ್ಯಾಯಗಳನ್ನು ತಡೆಗಟ್ಟುವುದಕ್ಕೆ ರಾ ಅಂಡ್ ಆರ್ಡರ್ ಇಲಾಖೆ ಇದೆ. ವಿದ್ಯಾ ಸಂಸ್ಥೆಗಳಿಗೆ ಉಚಿತವಾಗಿ ಕೊಡತಕ್ಕಂಥ ಸಾಮಾನುಗಳನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ, ಅದನ್ನು ಕಂಡುಹಿಡಿಯುವುದಕ್ಕೆ ಕದ್ದ ಮಾಲುಗಳ ಮೇಲೆ ಹಾಕಿದ ದಂಡದಲ್ಲಿ ಅವರಿಗೆ ಅರ್ಧದಷ್ಟು ಬಹುಮಾನವನ್ನಾಗಿ ಕೊಡುವುದು ಸರಿಯಲ್ಲ. ಕೇರ್ ಸಂಸ್ಥೆಯವರು ನಮಗೆ ಕೊಡ ತಕ್ಕಂಥ ಹಾಲಿನ ಪುಡಿಯನ್ನು ದುರುಪಯೋಗ ಮಾಡುವುದು ದೇಶಕ್ಕೆ ಅವಮಾನಕರವಾದ ಪ್ರಶ್ನೆ. ಈ ದೇಶದಲ್ಲಿ ಬಡತನ ಜಾಸ್ತಿಯಾಗಿದೆ ಎಂದೂ ನಾವು ಭಿಕ್ಷೆ ಮಾಡುತ್ತಿದ್ದೇವೆಂದೂ ಆ ಸಂಸ್ಥೆಯವರು ನಮಗೆ ಈ ರೀತಿ ಪುಕ್ಕಟೆ ಕೊಡುತ್ತಾರೆ. ಇದನ್ನು ನದುಪಯೋಗ ಮಾಡಿಕೊಳ್ಳದೆ ಅದರಲ್ಲೂ ಕಳ್ಳತನವಾಗಿರುವ ಸಾಮಾನುಗಳನ್ನು ಹಿಡಿದರೆ ದಂಡದಲ್ಲಿ ಅರ್ಧದಷ್ಟು ಪೋಲೀಸಿನವರಿಗೆ ಇನ್‌ಸೆಂಟೀವ್ ಆಗಿ ಕೊಡುತ್ತೇವೆ ಎಂದರೆ ಇದು ನಾಚಿಕೆಗೇಡುತನದ ಪ್ರಶ್ನೆ, ಇದು ಬ್ಲಾಕ್ ಆಕ್ಟ್. ಅದು ಸರಿಯಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ಹಾಗಾದರೆ ಪೋಲೀಸಿನವರನ್ನು ಏತಕ್ಕೆ ಇಡಬೇಕು ? ಕಾನೂನು ಏಕೆ ಇರಬೇಕು ? ಹಾಗಾದರೆ ಐ. ಜಿ. ಪಿ. ಯವರು ಇಂತಿಂಥ ಇಲಾಖೆಗಳಲ್ಲಿ ಇಂತಿಂಥಾ ಅಕ್ರಮಗಳನ್ನು ತಡೆಗಟ್ಟಬೇಕು, ಅದಕ್ಕೆ ಹಾಕುವ ದಂಡದಲ್ಲಿ 25ರಷ್ಟು, 50 ರಷ್ಟು, 75 ರಷ್ಟು ಬಹುಮಾನ ಕೊಡಿ ಕಳ್ಳತನ, ಅಕ್ರಮಗಳು—ನಿಂತುಕೊಳ್ಳುತ್ತವೆ ಎಂದು ಹೇಳುತ್ತಾರೆ. ಹಾಗೆ ಮಾಡುವುದು ಸರಿಯ ? ಈ ಮಾರ್ಗಕ್ಕೆ ಕೊನೆ ಎಲ್ಲಿ ! ಪೋಲೀಸಿನವರಿಗೆ ಸಂಬಳ ಕೊಡುವುದಿಲ್ಲವೇ ? ಅವರು ಬೇರೆ ಏನು ಕೆಲಸ ಮಾಡಬೇಕು ಎಂದು ಇಟ್ಟುಕೊಂಡಿದ್ದೀರಿ ! ಸಂಬಳದ ಜೊತೆಗೆ ಗಂಬಳವನ್ನೂ ಕೊಟ್ಟು ಅಧಿಕಾರಿಗಳಲ್ಲಿ ಅಸಹಾಯಕತೆಯನ್ನು ಏಕೆ ಹೆಚ್ಚಿಸುತ್ತೀರಿ ! ಯಾರಾದರೂ ಸುದ್ದಿ ಕೊಟ್ಟರೆ ಅದನ್ನು ತಾವೇ ಸ್ವತಃ ಕಂಡು ಹಿಡಿದಿರುವುದಾಗಿ ಅದರಿಂದ ಬರುವ ಎಲ್ಲ ಸೌಲಭ್ಯಗಳನ್ನೂ ಅವರೇ ಪಡೆಯುವುದಕ್ಕೆ ಪ್ರಯತ್ನ ಮಾಡುವುದಲ್ಲದೆ ಕಳ್ಳತನವೂ ಜಾಸ್ತಿಯಾಗುವ ನೆರವಾಗುತ್ತಾರೆ. ಬಹುಮಾನ ಕೊಡುತ್ತೇವೆಂದು ಹೇಳುವುದರಿಂದ ಕಳ್ಳತನ ಕಡಮೆ ಆಗುವುದಿಲ್ಲ. ಗಂಧದ ಮರ ಕಳ್ಳತನದಲ್ಲಿ ಸಾಗಿಸುವ ವಿಚಾರದಲ್ಲಿ ಏನಾದರೂ ಗೊತ್ತಾದರೆ ನನಗೆ ಸ್ವಲ್ಪ ಸಮಾಚಾರ ಗೊತ್ತಾಗಿದೆ, ದಂಡದಲ್ಲಿ ಅರ್ಧ ಭಾಗವನ್ನು ನನಗೆ ಕೊಡುವುದಾದರೆ ಅದನ್ನು ಕಂಡು ಹಿಡಿಯುತ್ತೇನೆ ಎಂದು ಹೇಳುವ ಪ್ರಸಂಗ ಬರುತ್ತದೆ. ನಾಲ್ಕು ಲಕ್ಷ ರೂಪಾಯಿ ಬೆಲೆ ಬಾಳುವ ಗಂಧದ ಮರವನ್ನು ಪತ್ತೆ ಮಾಡಿದ ಮೇಲೆ 8 ಲಕ್ಷ ರೂಪಾಯಿ ದಂಡ ಹಾಕುತ್ತಾರೆ. ಅದರಲ್ಲಿ ಅರ್ಧ ನಾಗ ಸಿಕ್ಕುತ್ತದೆ ಎಂದು ವ್ಯಾಪಾರ ಮಾಡಿಕೊಳ್ಳುತ್ತಾರೆ. ಆದ್ದರಿಂದ ಈಗ ತಂದಿರುವ ತಿದ್ದುಪಡಿಯೂ ಸರಿಯಲ್ಲ, ಮತ್ತು ಮೂಲ ಕಾನೂನನ್ನು ನೋಡಿದರೆ ನಾಚಿಕೆಪಟ್ಟು ಕೊಳ್ಳಬೇಕಾಗಿದೆ. ಇಂಥದನ್ನು ಆದಷ್ಟು ಏರೋದಿಸಿ, ಮಾನ್ಯ ಮಂತ್ರಿಗಳು ಈಗ ತಂದಿರುವ ತಿದ್ದುಪಡಿಯನ್ನು ವಾಪಸು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

† ಶ್ರೀ ಎನ್. ಜಿ. ಹಾಲಪ್ಪ (ಚನ್ನಗಿರಿ).—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಹೇಳಿದರು, ಈ ತಿದ್ದುಪಡಿಯನ್ನು ಐ. ಜಿ. ಪಿ. ಅವರ ಸಲಹೆಯ ಮೇಲೆ ತರಲಾಗಿದೆ ಎಂದು. ಬಹುಶಃ ಐ. ಜಿ. ಪಿ. ಅವರಿಗೆ ಅನ್ನಿಸಿರಬಹುದು, ಪಾನನಿರೋಧವನ್ನು ತೆಗೆದುಹಾಕಿದ ಮೇಲೆ ಪೋಲೀಸಿನವರಿಗೆ ಬೇರೆ ಸೋರ್ಸ್ ಆಫ್ ರೆವೆನ್ಯೂ ಇಲ್ಲದಂತಾಯಿತು, ಅದಕ್ಕಾಗಿ ಕಷ್ಟಪಟ್ಟು

ಸರ್ಕಾರಕ್ಕೆ ಮನವಿ ಮಾಡಿಕೊಂಡಿರಬಹುದು, ಅವರಿಗೆ ಬೇರೆ ರೀತಿಯಲ್ಲಿ ಆದಾಯ ಬರುವ ಹಾಗೆ ಮಾಡಬೇಕು ಎಂದು ಹೇಳಿರಬಹುದು. ಅದಕ್ಕಾಗಿ ಈ ತಿದ್ದುಪಡಿಯನ್ನು ತಂದಿದ್ದಾರೆಂದು ಭಾವಿಸುತ್ತೇನೆ. ಕೇರ್ ಸಂಸ್ಥೆ ಕೊಡತಕ್ಕ ಆಹಾರ ವಸ್ತುಗಳನ್ನು ಯಾರಿಗೆ ಕೊಡುತ್ತೀರಿ ಎಂದರೆ ಸರ್ಕಾರಿ ಅಧಿಕಾರಿಗಳಿಗೆ. ಅಧಿಕಾರಿಗಳು ಸರಿಯಾಗಿ ಅವನ್ನು ವಿತರಣೆ ಮಾಡದೆ ಹೆಚ್ಚು ಕಡಮೆ ಮಾಡಿದರೆ ಅಂಥವರ ಮೇಲೆ ಹತೋಟಿಯನ್ನು ಇಟ್ಟುಕೊಳ್ಳದೆ ಕಾಳಸಂತೆಗೆ ಹೋಗುವುದಕ್ಕೆ ಅವಕಾಶ ಕೊಟ್ಟ ದ್ದೀರಿ. ಶಾಲಾ ಉಪಾಧ್ಯಾಯರು ಮತ್ತು ಇನ್‌ಸ್ಪೆಕ್ಟರುಗಳು ಹಣದ ಆಸೆಯಿಂದ ಖಾನಗಿ ಜನರಿಗೆ ಮಾರಿದರೆ ಅದು ಸರ್ಕಾರಿ ಅಧಿಕಾರಿಗಳಿಂದಲೇ ಕಾಳಸಂತೆಗೆ ಹೋಗುತ್ತದೆ. ಇಂಥ ಸಂದರ್ಭಗಳಲ್ಲಿ ಕೋರ್ಟಿಗೆ ಹೋಗತಕ್ಕ ಪ್ರಸಂಗ ಬರುತ್ತದೆ. ಇದು ಅಧಿಕಾರಿಗಳ ಮೇಲೆ ಹತೋಟಿಯನ್ನು ಇಟ್ಟುಕೊಳ್ಳದೆ ಇರತಕ್ಕ ಸರ್ಕಾರದ ಅದಕ್ಷತೆಯನ್ನು ತೋರಿಸುತ್ತದೆಯೇ ಹೊರತು ಈ ತಿದ್ದುಪಡಿಯನ್ನು ತಂದಿರುವುದರಲ್ಲಿ ಏನೂ ಅರ್ಥವಿಲ್ಲ.

ಪೋಲೀಸಿನವರಿಗೆ ಇಂಥ ಅಧಿಕಾರವನ್ನು ಕೊಟ್ಟರೆ ಅದನ್ನು ದುರುಪಯೋಗ ಮಾಡುವ ಸಾಧ್ಯತೆಗಳಿವೆ. ಯಾರೋ ಒಬ್ಬ ಶಾಲಾ ಉಪಾಧ್ಯಾಯ ದುರುಪಯೋಗ ಮಾಡಿದ ಎಂದು ಇಟ್ಟು ಕೊಳ್ಳೋಣ. ಪೋಲೀಸ್ ಅಧಿಕಾರಿಗಳನ್ನು ಒಳಗೆ ಹಾಕಿಕೊಂಡರೆ ಎರಡು ಮೂರು ಸಾವಿರ ರೂಪಾಯಿ ಮಾಲನ್ನು ಕಾಳಸಂತೆಯಲ್ಲಿ ಮಾರಿ ಕಳ್ಳತನವಾಗಿದೆ ಎಂದು ದೂರು ಕೊಟ್ಟರೆ ಯಾರೋ ಒಬ್ಬನನ್ನು ಹಿಡಿದುಕೊಂಡು ಬರುತ್ತಾರೆ. ಇದು ತಿನ್ನುವ ಪದಾರ್ಥವಾಗಿರುವುದರಿಂದ ಅದನ್ನು ತಿಂದು ಹಾಕಿದೆ ಎಂದು ಅವನು ಹೇಳಬಹುದು. ಇಂಥವು ಜೇಕಾದಷ್ಟು ನಡೆಯುವುದಕ್ಕೆ ಅವಕಾಶ ಎದೆ. ಡ್ರೈಟನ್ ಕೊಲೆ ಸಂಬಂಧದಲ್ಲಿ ಕೊಲೆ ಮಾಡಿದವನು ಯಾರೋ, ಅಪರಾಧಿ ಯಾರೋ! ಇದರ ಬಗ್ಗೆ ಹೈಕೋರ್ಟಿನಲ್ಲಿ ಸ್ಪಿಕ್ಚರ್ ಆಗಿದೆ. ಒಬ್ಬ ನಿರಪರಾಧಿಯನ್ನು ಪೋಲೀಸಿನವರು ಹಿಡಿದುಕೊಂಡು ಬಂದು ಅವನ ಮೇಲೆ ಕೇಸು ಹಾಕುತ್ತಾರೆ. ಇಂಥವಕ್ಕೆ ಅವಕಾಶವಿದೆ.

They make a maximum benefit out of this. When it is made a cognizable offence, there is no need to give the excess amount to them as reward. In the Statement of objects and reasons it is observed :

> " that the Police Officers and others who detect or help in the detection of cases relating to Gift Goods in which a measure of industry and investigation beyond what is expected of them in the performanec fe duties, is called for, should be awarded suitable rewards in recognition of their service, as such recognition will constitute a great incentive for them and contribute to the detection of a large number of such cases."

It is said that "investigation beyond what is expected of them". If you concede it is out of the duties of the Police, what type of administration it is ? What better business have they got to do than detecting the selling of the gift goods that are given by various countries ? If you admit that you are the distributing agency and the goods gifted are being sold in black market, you are to be punished and you stand condemned in the eyes of international world. It is not a good thing on the part of the Government to bring this bad legislation.

ಪಾನನಿರೋಧದ ಸಂಬಂಧದಲ್ಲಿ ಏನು ಮಾಡುತ್ತಾರೆಂದರೆ ಅನೇಕ ಜನ ಕುಡಿಯದೇ ಇದ್ದರೂ ಅವರನ್ನೂ ಹಿಡಿದುಕೊಂಡು ಹೋಗಿ, ಕೇಸು ಹಾಕಿ, ರಾಯರನ್ನು ಇಟ್ಟುಕೊಳ್ಳಬೇಡ, ಜುರ್ಮಾನೆ ಹಾಕುತ್ತಾರೆ, ಕೊಟ್ಟು ಬಿಡು ಎಂದು ಪೋಲೀಸಿನವರೇ ಹಣ ಕೊಟ್ಟು ಕೇಸು ಹಾಕುತ್ತಿದ್ದರು. For statistical purposes they want so many cases. They may do mischief in this connection and book the innocent people also let apart participating in selling goods and taking money. They are the first criminals. I call this Act as a Black Act. You are indirectly helping the Police to become more corrupt. With these words I oppose this Amendment Bill.

†ಶ್ರೀ ಎನ್. ಬಂಗಾರಪ್ಪ (ಸೊರಬ).—ಸ್ವಾಮಿ, ಸರ್ಕಾರದ ವತಿಯಿಂದ ತಂದಿರುವ ಮೈಸೂರ್ ಗಿಫ್ಟ್ ಗುಡ್ಸ್ ಅನ್‌ಲಾಫುಲ್ ಪೊಸೆಷನ್ ಅಮೆಂಡ್‌ಮೆಂಟ್ ಬಿಲ್ಲನ್ನಲ್ಲಿ ಸೂಚಿಸಿರುವ 'ಅಂಡ್ ಅದರ್ ಪರ್ಸನ್ಸ್' ಎನ್ನುವ ಪದಗಳನ್ನು ಬಿಟ್ಟರೆ ಉಳಿದುದಕ್ಕೆ ಅಷ್ಟಕ್ಕೂ ವಿರೋಧ ಮಾಡುತ್ತೇನೆ. ಈ ಸಭೆಯ ಮಾನ್ಯ ಸದಸ್ಯರು ಪೋಲೀಸ್ ಅಧಿಕಾರಿಗಳು ಯಾರು ಎನ್ನುವ ಬಗ್ಗೆ ತಿಳಿಸಿದ್ದಾರೆ. ರಿವಾರ್ಡ್ ಕೊಡುವುದು ಯಾರಿಗೆ? ರಿವಾರ್ಡ್ ಎನ್ನುವ ಪದ, ಬಹುಮಾನ ಎನ್ನುವ ಪದ, ಯಾರಿಗಾದರೂ ಕೊಡಬಹುದು ಎನ್ನುವ ಪ್ರಶ್ನೆ, ಮೂಲ ಪ್ರಶ್ನೆ ಇದರಲ್ಲಿ ಅಡಗಿದೆ. ದೇಶದ ಬಗ್ಗೆ ಚಿಂತನೆ ಮಾಡಿಲ್ಲ, ಪ್ರಜೆಗಳ ಬಗ್ಗೆ ಚಿಂತನೆ ಮಾಡಿಲ್ಲ, ಸಮಾಜದಲ್ಲಿರುವ ಬಡವರು, ತುಳಿತಕ್ಕೆ ಸಿಕ್ಕಿರುವ ಜನರ ಬಗ್ಗೆ, ಅನ್ಯಾಯಕ್ಕೆ ಸಿಕ್ಕಿರುವ ಜನರ ಬಗ್ಗೆ ಯೋಚನೆ ಮಾಡಿ ಸಹಾಯ ಮಾಡುವುದಕ್ಕೆ ಏನಾದರೂ ಪ್ರಯತ್ನ ಯಾವುದಾದರೂ ಒಬ್ಬ ವ್ಯಕ್ತಿ ಈ ದೇಶದಲ್ಲಿ ಮಾಡಿದರೆ ಅವನಿಗೆ ಬಹುಮಾನ ಕಟ್ಟಿಟ್ಟ ಬುತ್ತಿ ಎಂದು ಮಾಡಬೇಕು. ರಿವಾರ್ಡ್ ಕೊಡುವುದು ಯಾರಿಗೆ ಎನ್ನುವ ಪ್ರಶ್ನೆ ಇದೆ. ಯಾರಿಗೆ ಎಂದರೆ ಪೋಲೀಸ್ ಅಧಿಕಾರಿಗಳು ಮತ್ತು ಅದರ್ ಪರ್ಸನ್ಸ್ ಎಂದು ಇದೆ. ಎರಡು ಕ್ಯಾಟೆಗರಿ ಇವೆ. ಜುರ್ಮಾನೆ ಹಾಕಿದರೆ, ವಸೂಲಾಗುವ ಹಣದಲ್ಲಿ, ಮ್ಯಾಜಿಸ್ಟ್ರೇಟರು ಇಷ್ಟಷ್ಟರ ಸ್ವಲ್ಪ ಹಣ ಕೊಡಬಹುದು ಎಂದು ಇದೆ. ಕ್ಲಾಜ್ 5(ಸಿ) ಪ್ರಕಾರ ಪೋಲೀಸ್ ಅಧಿಕಾರಿಗಳದು ಒಂದು ಗುಂಪು, ಇನ್ನೊಂದು ಪೋಲೀಸರನ್ನು ಬಿಟ್ಟು ಯಾರು ಯಾರು ತನಿಖೆ ಕಾಲದಲ್ಲಿ ಅವರಿಗೆ ಸಹಾಯ ಒದಗಿಸುತ್ತಾರೆ ಆ ಜನಗಳದು. ಈ ಎರಡೂ ಜನಗಳಿಗೆ ಇದರಲ್ಲಿ ರಿವಾರ್ಡ್ ಪಡೆಯುವುದಕ್ಕೆ ಅವಕಾಶವಿದೆ. ಪೋಲೀಸರ ಬಗ್ಗೆ ಹೇಳುವುದಾದರೆ ಅದು ದೊಡ್ಡ ರಾದ್ಧಾಂತ. ಅವರು ಮಾಡಕ್ಕೆ ಕೆಲಸಗಳನ್ನೆಲ್ಲ ಮಾಡಿಸುವುದಕ್ಕೆ ಹೋದರೆ ಅದಕ್ಕೆ ಬೇಕಾದಷ್ಟು ಕಾಲವನ್ನು ತಾವು ಕೊಡುವುದಿಲ್ಲವಾದ್ದರಿಂದ ಹೇಳುವುದಿಲ್ಲ. ಪೋಲೀಸ್ ಅಧಿಕಾರಿಗಳಲ್ಲಿ ಕೆಲವರನ್ನು ಬಿಟ್ಟರೆ ಉಳಿದವರೆಲ್ಲ ಲಂಚಕೋರರು. ಪೋಲೀಸ್ ಅಧಿಕಾರಿಗಳಲ್ಲಿ ನೂರಕ್ಕೆ 99 ಭಾಗ ಕರಪ್ಟ್ ಎನ್ನುವಷ್ಟಕ್ಕ ವಿಷಯ ಈ ತಿದ್ದುಪಡಿ ಮಸೂದೆಯನ್ನು ಮಂಡಿಸಿರುವ ಮಾನ್ಯ ಸೋಗಿ ಅವರಿಗೂ ಕೂಡ ಗೊತ್ತು. ಇಂಥವರಿಗೆ ರಿವಾರ್ಡ್ ಕೊಡಬೇಕು ಎಂದು ಹೇಳುತ್ತಾರೆ.

4-00 P.M.

ಈಗ ಪೋಲೀಸಿನವರಿಗೆ ಬಹುಮಾನ ಕೊಡಬೇಕೆಂದು ಮಾಡಿದ್ದಾರೆ. ಆದರೆ ಅವರು ಶೇಕಡ ತೊಂಬತ್ತೊಂಭತ್ತರಷ್ಟು ಲಂಚಕೋರರು. ಅದರೆ ಮಂತ್ರಿಗಳು ಅದನ್ನು ಒಪ್ಪಿಕೊಳ್ಳುವುದಿಲ್ಲ, ಎಲ್ಲಾ ಮಂತ್ರಿಗಳೂ ಕೂಡ ಹಾಗೆ ಹೇಳುವುದನ್ನು ಕಲಿತಿದ್ದಾರೆ. ಆದರೆ ತಮ್ಮ ಆತ್ಮ ಪರಿಶೋಧನೆ ಮಾಡಿಕೊಂಡು ಹೇಳಲಿ ಎಂದು ನಾನು ಕೇಳುತ್ತೇನೆ. ನೂರರಲ್ಲಿ 99 ಜನ ಪೋಲೀಸಿನವರು ಲಂಚಕೋರರಾಗಿರುವಾಗ ಅವರಿಗೆ ಬಹುಮಾನ ಕೊಡಲು ಈ ಮಸೂದೆಯಲ್ಲಿ ಉದ್ದೇಶಪಟ್ಟಿದ್ದಾರೆ. ಲಂಚಗುಳಿತನದಲ್ಲಿ ನಿಪುಣರಾಗಿರುವವರು ಪೋಲೀಸ್ ಇಲಾಖೆ, ವಿಜಿಲೆನ್ಸ್ ಕಮಿಷನ್ನಿನಲ್ಲಿ, ಆಂಟಿ ಕರಪ್ಷನ್ ಇರಾಖೆಯಲ್ಲಿ ಇದ್ದಾರೆ. ಎಲ್ಲಿಗೆ ಹೋದರೂ ಕೂಡ ಲಂಚಕೋರರು ಇದ್ದಾರೆ. ಹಾಗಿರುವಾಗ ಬಹುಮಾನ ಅಂಥವರಿಗೆ ಕೊಡುವ ಯೋಜನೆಮಾಡಿ ಅದನ್ನು ತಿದ್ದುಪಡಿ ಮಸೂದೆ ರೂಪದಲ್ಲಿ ತಂದಿದ್ದೀರಿ. ಈ ರೀತಿ ಮಾಡಬಹುದೇ! ಅದರ್ ಪರ್ಸನ್ಸ್ ಎಂದು ಬೇಕಾದರೆ ಹೇಳಿ. ಹಾಲಿನ ಪುಡಿ ಕದಿಯುವಾಗ ತಕ್ಷಣ ಹಿಡಿಯುವುದಕ್ಕೆ ಸಾಧ್ಯವಿಲ್ಲ. ಒಂದು ಶಾಲೆಗೆ ಕೊಟ್ಟ ಹಾಲಿನ ಪುಡಿ ಕಳ್ಳತನವಾದರೆ ಶಾಲಾ ಉಪಾಧ್ಯಾಯರು ಅಥವ ಜವಾನ ಅಥವ ಹೆಡ್‌ಮಾಸ್ಟರು ಸಮಾಚಾರ ತಿಳಿಸಿ ದೂರು ಕೊಡಬೇಕೇ ಹೊರತು ಅದು ಮೊದಲು ಪೋಲೀಸರಿಗೆ ಗೊತ್ತಾಗುವುದಿಲ್ಲ. ಯಾರಾದರೂ ಕಳ್ಳತನವಾಗಿದೆ ಎಂದು ದೂರು ಕೊಟ್ಟಮೇಲೆ ಕೇಸ್ ರಿಜಿಸ್ಟರ್ ಮಾಡಿಕೊಂಡು ತನಿಖೆ ಮಾಡಬಹುದು, ಆಗ ಶುದ್ಧವಾದ ಮನಸ್ಸಿರುವವರು ಸಹಾಯಮಾಡಿದರೆ ತನಿಖೆಯಿಂದ ಫಲ ದೊರೆಯಬಹುದು. ಲಂಚ ನಿಲ್ಲಿಸುವುದಕ್ಕೆ ಜನರಿಗೆ ಸಾಧ್ಯವಿದೆ, ಒಂದು ಸಮಿತಿ ಮಾಡಬೇಕು ಎಂದು ಹೇಳಿತ್ತು, ಅದರ ವಿಚಾರ ಈಗ ಬೇಡ. ಲಂಚಕೋರರಾದ ಪೋಲೀಸು ಅಧಿಕಾರಿಗಳಿಗೆ ಬಹುಮಾನ ಕೊಡುವ ಯೋಜನೆ ಸರಿಯಲ್ಲ. ಕಾನೂನು ಮಾಡಿ ಬಹುಮಾನ ಪೋಲೀಸಿನವರಿಗೆ ಕೊಡಲು ಈಗ ಕಾನೂನು ತಂದಿರುವುದು ಅವಹೇಳನಕರವಾದುದು.

ಹೊಸ ಸೆಕ್ಷನ್ 5ಸಿ ವಿಚಾರವನ್ನು ನಾಗಪ್ಪನವರು ಈಗಾಗಲೇ ಹೇಳಿದ್ದಾರೆ. ಒರಿಜಿನಲ್ ಆಕ್ಟ್ ಜೊತೆಯಲ್ಲಿ ಇದನ್ನು ಓದಬೇಕು, 200 ರೂಪಾಯಿ ಫೈನ್ ಹಾಕಿದರೆ ಅರ್ಧವನ್ನು ಬಹುಮಾನವಾಗಿ ಕೊಡಬೇಕೆಂದು ಒತ್ತಾಯವಿದೆ. ಈ ಕ್ಲಾಜು ಸರಿಯಾಗಿ ರಚನೆಯಾಗಿಲ್ಲ. ಏನೇ ಸೆಕ್ಷನ್ ನಲ್ಲಿ ಮೊಬಲಗು ಸರಿಯಾಗಿ ಸೂಚಿಸಿಲ್ಲ. ಆದುದರಿಂದ 2 ಸಾವಿರ ರೂಪಾಯಿ ಜುರ್ಮಾನೆ ಹಾಕುವುದಕ್ಕೆ ಅಧಿಕಾರವಿದ್ದರೆ ಅಲ್ಲಿಯವರೆಗೂ ಹಾಕಬಹುದು. 3 ನೆಯ ಸೆಕ್ಷನ್ ವೇಗ್ ಆಗಿದೆ,

ಅದರಲ್ಲಿ ಫಿಗರ್ ಇಲ್ಲ. ಕೊನೆಯ ಪಕ್ಷ 3 ನೆಯ ಸೆಕ್ಷನ್ ಅದರೂ ತಿದ್ದುಪಡಿಮಾಡಬೇಕಾಗಿತ್ತು. ಕೋರ್ಟಿನಲ್ಲಿ ಜುರ್ಮಾನೆ ಹಾಕಿದಾಗ ಪಾರ್ಟಿಗೆ ಕೊಡುವುದಕ್ಕೆ ಶಕ್ತಿ ಇಲ್ಲದಿದ್ದರೆ ಒಂದು ವಾರ ಸಜಾ ಆಗುವುದು, ಜೈಲಿಗೆ ಹೋಗಬೇಕಾಗುವುದು. ಆಗ ಜುರ್ಮಾನೆ ವಸೂಲಾಗುವುದಿಲ್ಲ.

ಶ್ರೀ ಎನ್. ಎಂ. ಕೊಟ್ರಬಸಪ್ಪ ಸೋಗಿ.—ನನಗೆ ತಿಳಿದಮಟ್ಟಿಗೆ ಲೆವಿ ಮಾಡುವುದು ಎಂದರೆ ಅದನ್ನು ವಸೂಲುಮಾಡಬೇಕು ಎಂಬ ಅರ್ಥವೂ ಬರುತ್ತದೆ.

ಶ್ರೀ ಎಸ್. ಬಂಗಾರಪ್ಪ.—ನನ್ನ ಪ್ರಕಾರ ಹಾಗಾಗುವುದಿಲ್ಲ. ಲೆವೀಡ್ ಅಂಡ್ ಕಲೆಕ್ಟೆಡ್ ಎಂದು ಸ್ಪಷ್ಟವಾಗಿ ಏಕೆ ಹಾಕಬಾರದು ? ರಿಪಿಟಿಷನ್ ಆಗಬಹುದು, ಆದರೆ ಅನುಮಾನವಿರುವುದಿಲ್ಲ. ರಿಪಿಟಿಷನ್ ಆದರೆ ತೊಂದರೆಯಿಲ್ಲ. ಜುರ್ಮಾನೆ ಕೊಡಲು ಹಣವಿಲ್ಲದೆ ಅಪರಾಧಿ ಜೈಲಿಗೆ ಹೋದರೆ ಜುರ್ಮಾನೆ ಯಾರು ಕೊಡಬೇಕು ? ಆಗ ಸರ್ಕಾರ ಖಜಾನೆಯಿಂದ ಪೋಲೀಸಿನವರಿಗೆ ಕೊಡಬೇಕು. ಆದುದರಿಂದ ಪುನಃ ಈ ವಿಚಾರವನ್ನು ಪರಿಶೀಲಿಸಬೇಕು. ಅದರ್ ಪರ್ಸನ್ಸ್ ಅಂದರೆ ಸಾಕ್ಷಿ ಹೇಳುವವರು. ಜುರ್ಮಾನೆ ಹಣ ಸಾಕ್ಷಿಗಳಿಗೂ ಮತ್ತು ಪೋಲೀಸರಿಗೂ ಹಂಚಿಕೆಯಾಗಬೇಕು. 25 ರೂಪಾಯಿ ಜುರ್ಮಾನೆ ಹಾಕಿದರೆ ಹನ್ನೆರಡೂವರೆ ರೂಪಾಯಿ 6 ಜನರಿಗೆ ಹಂಚಿಕೆಯಾಗಬೇಕಾಗಿ ಬರಬಹುದು. ಆದರೆ ಇದರಿಂದ ಎಷ್ಟು ಕೋರ್ಟಿಗೆ ಹೋದಾಗ ಖರ್ಚಾಗುತ್ತದೆ ಎಂಬುದನ್ನು ವಿಚಾರಮಾಡಬೇಕು. ಅಲ್ಲದೆ 3 ನೆಯ ಸೆಕ್ಷನ್‌ನಲ್ಲಿ ಹಣ ಇಷ್ಟು ಎಂದು ನಿಗದಿಯಾಗಿ ತಿಳಿಸುವುದು ಒಳ್ಳೆಯದು.

ಫೈನ್ ಅಂತ ಅನ್ನುವವರೆಗೂ ಸರಿಯಾಗಬಹುದು. ಅನಂತರ "fine which may be levied", ಅನ್ನುವುದರ ಬದಲಾಗಿ "which may be levied and collected", ಎಂದರೆ ಸರಿಯಾಗುತ್ತದೆ. ಇಷ್ಟು ವಿಷಯ ಪರಿಶೀಲನೆ ಮಾಡದೆ ಇದನ್ನು ತರಬಾರದಾಗಿತ್ತು. ಈಗ ತಂದಿರುವ ಅಮೆಂಡ್‌ಮೆಂಟ್ ಒಳ್ಳೆಯದಲ್ಲ ಎಂದು ಹೇಳಿ ಇದನ್ನು ವಿರೋಧ ಮಾಡುತ್ತೇನೆ.

Sri B. B. SAYANAK (Belgaum).—I rise to oppose the Bill piloted by the hon. Deputy Minister for Education. It is highly objectionable to bring in such a Bill before this House, for the simple reason that there are no schools for boys and girls in all the villages. Under such a situation, where can the teachers store these gift goods ? Either they must store them in their houses or in someone else's house or keep them in the Education Inspector's House. The Inspector of Education, teachers and the police are all colluding to sell these gift goods to hotels. Why I am stating this is, there is a case in Belgaum where this milk powder was sold to a hotel and that case was tried in the First Class Magistrate's court. The Magistrate had to acquit the teacher because there was no evidence. There are no witnesses coming forward to give evidence. Therefore, through you, I request the Minister that instead of giving this half amount to the police officers, whose duty it is to detect all offences, they must give that amount to the persons who are going to depose on behalf of the Government while the cases are tried before the Magistrates.

What is the punishment prescribed under the Act ? I will read section 3 :

> "Penalty for unlawful possession of gift goods.—If any person is found, or is proved to have been in possession of any gift goods reasonably suspected of being stolen or unlawfully obtained, and cannot account satisfactorily how he came by the same, he shall, on conviction, be punished with imprisonment for a term which may extend to two years, or with fine, or with both."

(SRI B. B. SAYANAK)

The fine is prescribed. What my hon. friends have stated is correct. A Judge can levy a fine up to Rs. 2,000 and I submit that the hon. Minister for Education can amend section 3 and prescribe the amount for the offence.

With the above observations, I oppose the Bill.

† SRI V. N. PATIL (Humnabad).—I oppose the Bill. One fundamental issue is, this Bill is very strange. It is just like asking the hon. Speaker to maintain more discipline in the House and for so doing some incentive will be given. The Speaker is doing his duty, he does not require any incentive. There is the possibility of ten or more per cent of indiscipline and so provide for some incentive so that he can maintain decorum. I must say this is most disgraceful. The Police is dutybound to detect cases wherever some criminal act is done, wherever people are misusing public funds, wherever hoarding takes place or wherever unsocial elements rule the roost. One thing I must admit and that is, here the Government is frank and honest. I must compliment the Government because they have realised that people are not discharging their duties. Government has come to the conclusion that there is a section of the people in this country who do not hesitate to sell the milk powder given for the benefit of the children. There are people who unshamedly made it a profession to traffic in such things. Government are awakened to the situation and for this I must compliment them. But what is the solution? They have put the old wine in the new bottle with new labels. I want to ask, is it not the duty of the police official to detect cases? Wherever there is pilferage and other things, is it not their duty to detect? When milk powder and other things are given by CARE organisation or friendly countries or countries which claim to be philonthropic—some with a political motive—and they are sold, is it not their duty to detect them? The police officials will be using those goods because for the local made goods, they have to pay. In Bangalore itself from one corner of Avenue Road to the other end, there are hundreds of shops which deal with these things. I do not believe that they are doing so without the knowledge of the police officials. With their knowledge all these things are happening. So, for that act, the police officials are now being encouraged to claim more and more and it is a legalised, *mamool*, I should say. Our Education Minister is legalising the *mamool* business of the police department and I feel it is absurd that a person of his stature should go to do this. This is a retrograde step and it is not a progressive step and this will not be received well by any section of this House. Can we encourage police officials to claim more and more for doing their duty honestly? If you want to encourage the police, you give some beneficial schemes to their children; you can give them some enhancement in their salary and make them work more honestly. At the same time you must have some idea to give exemplary punishments to those who are not discharging

their duties properly. Unless this tendency is changed any amount of incentives will not work, Even if you give the entire amount to the police department, it would not be sufficient.

In the Magistrates' Courts, mostly innocent people are booked. When we meet Police friends over a chat and hold discussions, they make an actual confession that in order to build up police records they will have to prosecute innocent people also and file charge-sheets. They say that charge-sheet will have to be filed against somebody in order to secure conviction and justify their existence. So we fundamentally differ from the Government with regard to their idea of providing incentives to the Police Department for the detection of cases. It is the bounden duty of the police to detect the cases reported to them ; it is their first and foremost duty. On the other hand, if they fail to detect them, we must award them punishment. We should not give them incentives and lure them to rewards to do their legitimate work.

Now I want to give some constructive suggestions with regard to the utilisation of fine amount collected. Whatever money is collected by way of fine from the anti-social elements trading in gift goods, should not go to the Government coffers. One-eighth of this fine amount should be given to the informants as rewards for giving information leading to the detection of the offences. Sometimes, they will have even to risk their lives to fight against these anti-social elements. There are instances of smuggling having taken place in the Education Department and the hon. Deputy Minister may not be aware of such instances. He cannot be an Inspector of Schools to know them. After disbursing rewards to the informants, the rest of the fine amount realised should be transferred to the Students Benefit Fund. On no account should the fine amount go to the Government Treasury for being spent on inauguration of functions attended by Ministers.

The second suggestion I make is that in order that such unlawful and antio-scial offences may not be repeated, the photos of these anti-social elements may be hung in prominent places. It is well-known that people indulging in these shameful acts are mostly businessmen. If their photos are hung in street corners, it will go a long way in deterring them and other similar elements from repeating such disgraceful crimes.

Now I want to suggest the punishment that is to be awarded to the culprits. If the milk powder or any item of gift goods is worth Rs. 100 the case should be taken out of the purview of the Magistrate and transferred to the Court of the Sessions Judge for being tried by him. The accused should be convicted to one year's R. I. and a fine of Rs. 1,000 where the property confiscated is estimated at Rs. 100. The Government should not make a half-hearted approach to this anti-social evil. There is no meaning in shedding crocodile tears and showing lip-sympathy with this evil which has to be eradicated by awarding exemplary punishments to the offenders.

(SRI V. N. PATIL)

People indulging in these anti-social acts are not ordinary men running petty shops or hotels. These are the elite of the society belonging to Bangalore, Bellary and other big cities and towns. Only such rich and influential merchants could afford to trade in children's stuff. They are emboldened to indulge in such heinous acts because they know they can catch hold of a Minister like Sri Nogi or an M. L. A. like me and escape the clutches of law. For a moment don't think that these small shop keepers or those selling bananas indulge in them. The original fountain for these offences emanates from the big elite. These big people deserve not only punishment, but exemplary punishment. They mostly move in high political circles whose shelter they are sure of. When I say political circles, I mean the members of the party which is in power. Therefore the correction should start from the top.

I thank the Chair for giving me an opportunity to speak and conclude.

ಶ್ರೀ ಕೆ. ಸಂಗನಗೌಡ (ಲಿಂಗಸೂಗೂರು). —ಮಾನ್ಯ ಸಭಾಪತಿಗಳೇ, ನಾನು ಈಗ ಸರ್ಕಾರದವರು ಸಭೆಯ ಮುಂದೆ ಮುಂಡಿಸಿರತಕ್ಕ ಮೈಸೂರು ಗಿಫ್ಟ್ಸ್ ಗೂಡ್ಸ್ ಅನ್‌ರಾಪುರ್ ಪೊಸೆಷನ್ ಅಮೆಂಡ್‌ಮೆಂಟ್ ಬಿಲ್ಲನ್ನು ಸ್ವಾಗತಿಸುತ್ತಾ ಒಂದೆರಡು ವಿಷಯಗಳನ್ನು ಸರ್ಕಾರದವರ ಗಮನಕ್ಕೆ ತರಬಯಸುತ್ತೇನೆ.

ಈ ಒಂದು ವಿಶೇಷ ತಿದ್ದುಪಡಿಯ ಬಗ್ಗೆ ನನ್ನ ಮಾನ್ಯ ಸ್ನೇಹಿತರು ಇದನ್ನು ಏಕೋ ಒಂದು ಸಂಶಯದ ದೃಷ್ಟಿಯಿಂದ ನೋಡುತ್ತಿದ್ದಾರೆ. ಅವರು ಸೆಕ್ಷನ್ 5 (ಸಿ) ನಲ್ಲಿರತಕ್ಕ ಕೆಲವು ವಾಕ್ಯಗಳನ್ನು ವ್ಯಾಖ್ಯಾನ ಮಾಡುತ್ತ ಅವರು ಕೆಲವೊಂದು ವಿಷಯಗಳನ್ನು ಹೇಳಿದ್ದಾರೆ.

ಸ್ವಾಮಿ, ಈ ತಿದ್ದುಪಡಿಯಲ್ಲಿ ಸೂಚಿಸಿರುವಂತೆ ಪರದೇಶಗಳಿಂದ ಅಂದರೆ ಅಲ್ಲಿರತಕ್ಕ ಅನೇಕ ಸಂಘ ಸಂಸ್ಥೆಗಳಿಂದ ದಾನರೂಪವಾಗಿ ಶಿಕ್ಷಣ ಸಂಸ್ಥೆಗಳಿಂದ ಬರತಕ್ಕ ಆಹಾರ ವಸ್ತುಗಳನ್ನು ಅಲ್ಲಿಂದ ಸಾಗಿಸಿ ಸಣ್ಣ ಪುಟ್ಟ ದುಖಾನುಗಳಲ್ಲಿ ಮಾರಾಟ ಮಾಡಲಾಗುತ್ತಿದೆ. ಇದನ್ನು ತಡೆಗಟ್ಟುವುದಕ್ಕೆ ಒಂದು ಕಾನೂನನ್ನು ತರತಕ್ಕದ್ದು ಅತ್ಯಗತ್ಯ ಎಂದು 1963 ರಲ್ಲೇ ತೀರ್ಮಾನ ಮಾಡಲಾಗಿತ್ತು. ಅದರ ಪರಿಣಾಮವಾಗಿ ಈಗ ಈ ಕಾನೂನನ್ನು ತಂದಿದ್ದಾರೆಂದು ಕಾಣುತ್ತಿದೆ. ಹೀಗೆ ಪರದೇಶಗಳಿಂದ ದಾನವಾಗಿ ಕೊಡಲ್ಪಟ್ಟ ಅನೇಕ ಸಾಮಾನುಗಳು ಸಮಾಜದಲ್ಲಿ ಅನೇಕ ಜನರ ಕಣ್ಣು ಎದುರಿನಲ್ಲೇ ಮಾರಾಟವಾಗುತ್ತಿದ್ದರೂ ಜನರು ಅದನ್ನು ಕಣ್ಣಿಗೆ ಬೀಳದಂತೆ ಹೋಗುತ್ತಿದ್ದಾರೆ. ಇಂಥ ತಪ್ಪನ್ನು ಮಾಡತಕ್ಕ ಜನ ಸಮಾಜದಲ್ಲಿ ಇಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಪೋಲೀಸಿನವರು ಅನ್ಯಾಯವಾಗಿ ಮಾರಾಟವಾಗುತ್ತಿರುವ ಸಾಮಾನುಗಳನ್ನು ಕಂಡು ಹಿಡಿಯುವುದು ಒಂದು. ಅದರ ಜೊತೆಗೆ ಸಮಾಜದಲ್ಲಿರತಕ್ಕ ಬೇರೆಯವರು ಯಾರಾದರೂ ಅವರ ಗಮನಕ್ಕೆ ಇಂಥಾ ವಿಚಾರಗಳು ಬಿದ್ದಾಗ ಅವರು ಅದನ್ನ ಪೋಲೀಸಿನವರ ಗಮನಕ್ಕೆ ತಂದು, ತನ್ಮೂಲಕ ಸಮಾಜದಲ್ಲಿರತಕ್ಕ ಜನರ ಸ್ಥಾನಮಾನಗಳನ್ನ ಎತ್ತಿಹಿಡಿದು ಅವರನ್ನು ನೀತಿವಂತರಾಗಿ ಮಾಡುವುದು ಇದರಲ್ಲಿ ಸೇರಿರುತ್ತದೆ. ಇಂಥ ಒಂದು ಕಾನೂನು ಇಲ್ಲದೆ ಇದ್ದುದರಿಂದ ಈ ದಿವಸ ಬಜಾರಿನಲ್ಲಿ ಅಂಥಾ ಅನೇಕ ವಸ್ತುಗಳು ನಮ್ಮ ಕಣ್ಣೆದುರಿಗೇ ಮಾರಾಟವಾಗುತ್ತಿದ್ದರೂ ನಾವು ಅವುಗಳ ಬಗ್ಗೆ ಅನಾನಕ್ಕಿಯನ್ನು ಪಡಿಸಿ ನಾವೇನು ಮಾಡಬೇಕು? ನಮಗೇಕೆ ಇದರ ಗೋಜು ಎಂದು ಸುಮ್ಮನಾಗುತ್ತೇವೆ. ಇಂಥಾ ಅನಾನಕ್ಕಿಯನ್ನು ನೀಗುವುದಕ್ಕೆ ಒಂದು ಇನ್‌ಸೆಂಟೀವ್ ಅಗತ್ಯ. ಈ ಕಾರ್ಯವನ್ನು ಪೋಲೀಸಿನವರು ಮಾಡತಕ್ಕದ್ದು ಸ್ವಾಭಾವಿಕವಾಗಿದೆ. ಆದರೆ ಅವರಿಗೆ ಗೊತ್ತಾಗದೆ ಇದ್ದಾಗ ಈ ವಿಚಾರಗಳನ್ನು ಪೋಲೀಸಿನವರಿಗೆ ತಿಳಿಸಿ ಅವರಿಗೆ ಇಂಥ ಕೇಸುಗಳ ವಿಚಾರಣೆ ಮತ್ತು ತನಿಖೆಗಳನ್ನು ನಡೆಸುವುದಕ್ಕೆ ಇನ್‌ವೆಸ್ಟಿಗೇಷನ್ ನಡೆಸುವುದಕ್ಕೆ ಈ ಖಾನಗೀ ಜನರು ಒಂದು ಪಬ್ಲಿಸ್ಟಿ ಆಗುತ್ತಾರೆ. ಆದ್ದರಿಂದ ಮಾನ್ಯ ಸದಸ್ಯರು ಇಲ್ಲಿ ಬಳಸಿರತಕ್ಕ "ಅದರ್ ಪರ್ಸನ್" ಎಂಬ ಶಬ್ದಕ್ಕೆ ಗಮನ ಹೆಚ್ಚಿಗೆ ಕೊಡಬೇಕೆಂದು ಸೂಚಿಸಬಯಸುತ್ತೇನೆ.

ಇನ್ನೊಂದು ಮಾತನ್ನು ಹೇಳಬೇಕಾಗಿದೆ. ಫೈನಿನ ಬಗ್ಗೆ ಅನೇಕ ಸ್ನೇಹಿತರು ಹೇಳಿದ್ದಾರೆ. ತಿದ್ದುಪಡಿಯ ಕ್ಲಾಸ್ 5 (ಸಿ) ಪ್ರಕಾರ ಈ ಸಭೆಯಲ್ಲಿ ಸ್ವಲ್ಪ ಮಾದಕೇಳಿ ಬಂತು. ನಾನು ಹೇಳುವುದಿಷ್ಟೇ. ಮ್ಯಾಜಿಸ್ಟ್ರೇಟ್ ಅದವರು ಆ ಒಂದು ಕೇಸಿನ ಮೆರಿಟ್ ಮೇಲೆ ಫೈನ್ ಲೆವಿ ಮಾಡಬಹುದು. ಆ ಫೈನಿನ ಅರ್ಧ ಭಾಗವನ್ನು ಅವರಿಗೆ ಕೊಡಬಹುದು ಎಂದು ಹೇಳಿದ್ದಾರೆ.

4-30 P. M.

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಮ್ಯಾಜಿಸ್ಟ್ರೇಟ್ ಮೆ ಅವಾರ್ಡ್ ಎಂದು ಕಾನೂನಿನಲ್ಲಿದೆ. ಅರ್ಧವೇ ಕೊಡಬೇಕೆಂದು ಕಾನೂನಿನಲ್ಲಿಲ್ಲ.

ಶ್ರೀ ಕೆ. ಸಂಗನಗೌಡ.—ಫೈನ್ ಇಂಪೋಜ್ ಮಾಡುವುದು ಮ್ಯಾಜಿಸ್ಟ್ರೇಟರ ಕೆಲಸ. ಅದರೆ ಅದರ ಅರ್ಧವೋ ಅಥವಾ ಅದರ ಸ್ವಲ್ಪಭಾಗವೋ ಎಂಬುದನ್ನು ಅವರೇ ನಿರ್ಣಯ ಮಾಡತಕ್ಕದ್ದು.

ಇನ್ನು ಸೆಕ್ಷನ್ 31 ಪ್ರಕಾರ ಎಷ್ಟು ಜುರ್ಮಾನೆ ವಿಧಿಸುತ್ತಾರೋ ಅದರ ಅರ್ಧ ಕೊಡಿಸಬೇಕೋ ಅಥವಾ ಅಷ್ಟೂ ಕೂಡ ಪೋಲೀಸಿನವರಿಗೆ ಕೊಡಿಸಬೇಕೋ ಎಂಬುದು ಇದರಲ್ಲಿ ಕಡ್ಡಾಯವಾಗಿ ಹೇಳಿಲ್ಲ. ಅದರಲ್ಲಿ 'ಎನಿ ಪೋರ್ಷನ್' ಎಂದು ಹೇಳಿರುವುದರಿಂದ, ಆ ಒಂದು ದೃಷ್ಟಿಯಿಂದ ಈ ತಿದ್ದುಪಡಿ ವಿಧೇಯಕ ಬಹಳ ಒಳ್ಳೆಯದು ಇದೆ, ಆದ್ದರಿಂದ ಇದನ್ನು ಸ್ವಾಗತಿಸಬೇಕು, ವಿರೋಧ ಮಾಡುವ ಹಾಗೆ ಇಲ್ಲವೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಮಾನ್ಯ ಸಭಾಪತಿಗಳೇ, ಇದುವರೆಗೂ ಸುಮಾರು 11 ಜನ ಸನ್ಮಾನ್ಯ ಸದಸ್ಯರು ಈ ಒಂದು ಸಣ್ಣ ವಿಧೇಯಕದ ಮೇಲೆ ಚರ್ಚೆಮಾಡಿ ಅನೇಕ ಸೂಕ್ತ ಸಲಹೆಗಳನ್ನು ಮಾಡಿದ್ದಾರೆ ಮತ್ತು ಅದನ್ನು ಬಹಳ ಕಟುವಾಗಿ ಟೀಕಿಸಿ ವಿಮರ್ಶೆ ಮಾಡಿದ್ದಾರೆ. ಅದಕ್ಕಾಗಿ ಅವರಿಗೆ ಅಭಾರಿಯಾಗಿದ್ದೇನೆ. ಅವರು ಕೊಟ್ಟಂಥ ಅನೇಕ ಸೂಚನೆಗಳಿಗೆ ಅವರನ್ನು ನಾನು ನಿಜವಾಗಿ ಅಭಿನಂದಿಸುತ್ತೇನೆ. ಆದರೆ ಇದರಲ್ಲಿ ನನಗೆ ಹೆಚ್ಚಿಗೆ ಕಂಡುಬಂದಿರುವುದು ಮಾನ್ಯ ಸದಸ್ಯರು ಪೋಲೀಸ್ ಅಧಿಕಾರಿಗಳ ಬಗ್ಗೆ ತಮಗೆ ಇರುವ ದ್ವೇಷಾಸೂಯೆಯನ್ನು ವ್ಯಕ್ತ ಮಾಡಿರುವುದು. ಅದಕ್ಕಾಗಿ ನಾನು ಆರಂಭದಲ್ಲಿಯೇ ಹೇಳಿದೆ, ಈ ಮಸೂದೆಯ ಇತಿಮಿತಿ ಬಹಳ ಕಡಿಮೆ ಇದೆ, ಅದರೊಳಗೇ ಇರಬೇಕೆಂದು. ಈ ಮಸೂದೆ ಸಣ್ಣದಾದರೂ ಸಹ ಅದರ ಬಗ್ಗೆ ಚರ್ಚೆ ಬಹಳ ವಿವರವಾಗಿ ನಡೆಯಿತು. ಇಂತಹ ಒಂದು ಸಣ್ಣ ವಿಷಯವಾದರೂ ಅದರ ಬಗ್ಗೆ ಅನೇಕ ಮಾನ್ಯ ಸದಸ್ಯರು ಆಸಕ್ತಿವಹಿಸಿದುದಕ್ಕಾಗಿ ಅವರಿಗೆ ಅಭಿನಂದಿಸುತ್ತೇನೆ. ಮಾನ್ಯ ಸದಸ್ಯರು ಇದರೊಳಗೆ ಮುಖ್ಯವಾಗಿ ಗಮನಿಸಬೇಕಾದುದು ಈ ಒಂದು ಅಂಶವಿದೆ. ಇದರಲ್ಲಿ ಸರ್ಕಾರದವರು ಪೋಲೀಸ್ ಆಫೀಸರುಗಳಿಗಾಗಲೀ, ಯಾರಿಗೇ ಆಗಲಿ, ಬಹುಮಾನ ಅಥವಾ ಇನಾಂ ಕೊಡುವುದು ಅಲ್ಲ ಎಂದು ಬಹಳ ಚೆನ್ನಾಗಿ ಕಾಣಿಸಿದ್ದಾರೆ. ಇದರಲ್ಲಿ ಸರ್ಕಾರದವರೇ ಆಗಲೀ, ಮ್ಯಾಜಿಸ್ಟ್ರೇಟ್ ಅವರಾಗಲೀ ಪೋಲೀಸ್ ಆಫೀಸರುಗಳಿಗೆ ಯಾವುದೇ ವಿಧವಾದ ಪ್ರೊಮೊಷನ್ ಕೊಡುವ ಅವಶ್ಯಕತೆ ಒದಗಿಬರುವುದಿಲ್ಲ. ಈಗ ಗಿಫ್ಟ್ ಗುಡ್ಸ್ ಏನಿದೆಯೋ ಅದರಲ್ಲಿ ಏನಾದರೂ ಅವ್ಯವಹಾರ ನಡೆದರೆ, ಅನಧಿಕೃತವಾಗಿ ತೆಗೆದುಕೊಂಡು ಹೋದರೆ ಅಂತಹವರನ್ನು ಪತ್ತೆಮಾಡುವಾಗ ಪೋಲೀಸ್ ಆಫೀಸರುಗಳೇ ಆಗಲೀ ಅಥವಾ ಬೇರೆ ಖಾಸಗಿ ವ್ಯಕ್ತಿಗಳೇ ಆಗಲೀ ಅನೇಕ ವಿಧವಾಗಿ ಸಾಹಸ ಮಾಡಬೇಕಾಗುತ್ತದೆ, ತೊಂದರೆಪಡಬೇಕಾಗುತ್ತದೆ. ಒಮ್ಮೊಮ್ಮೆ ಪ್ರಾಣತ್ಯಾಗವಾಡುವಂಥ ತೊಂದರೆಗಳನ್ನು ಅನುಭವಿಸುತ್ತಾರೆ. ಅಂತಹ ಸಂದರ್ಭದಲ್ಲಿ ಅನೇಕ ತೊಂದರೆಗಳನ್ನು ಅನುಭವಿಸಿ, ಅಂತಹ ಕೇಸುಗಳನ್ನು ಪತ್ತೆಮಾಡುವುದಕ್ಕೆ ಬೇಕಾದಂಥ ಸಹಾಯಮಾಡಿದಂಥ ಪೋಲೀಸ್ ಅಧಿಕಾರಿಗಳೇ ಆಗಲೀ ಅಥವಾ ಖಾಸಗಿ ವ್ಯಕ್ತಿಗಳೇ ಆಗಲಿ, ಅವರ ಒಂದು ಸಾಹಸಕ್ಕೆ ಏನಾದರೂ ಒಂದು ಮರ್ಯಾದೆ ಮಾಡಬೇಕು, ಇನಾಂ ಕೊಡಬೇಕು ಮತ್ತು ಪ್ರೋತ್ಸಾಹ ಕೊಡಬೇಕು ಎಂಬ ಉದ್ದೇಶದಿಂದ ಈ ಬಿಲ್ಲನ್ನು ತಂದಿದ್ದಾಗಿದೆ. ಈ ಕೇಸುಗಳನ್ನು ವಿಚಾರಮಾಡುವ ಮ್ಯಾಜಿಸ್ಟ್ರೇಟ್ ಅವರ ಅಭಿಪ್ರಾಯದಲ್ಲಿ ಯಾರಾದರೂ ಶ್ಲಾಘನೀಯವಾದ ಕಾರ್ಯ ಮಾಡಿದ್ದಾರೆಂದು ಕಂಡುಬಂದರೆ, ಅಂತಹವರಿಗೆ ಒಂದು ಇನಾಂ ಕೊಡುವುದಕ್ಕೆ ಒಂದು ಅವಕಾಶವಿರಲಿ ಎಂದು ಮಾಡಿದ್ದೇವೆಯೇ ವಿನಹ ಸರ್ಕಾರದವರೇ ನೇರವಾಗಿ ಯಾವ ಬಹುಮಾನವನ್ನೂ ಕೊಡುವುದಿಲ್ಲ. ಆದರೆ ಕೆಲವು ಮಾನ್ಯ ಸದಸ್ಯರು ಇದನ್ನು ತಪ್ಪಾಗಿ ತಿಳಿದುಕೊಂಡು ಪೋಲೀಸ್ ಅಧಿಕಾರಿಗಳಿಗೆ ಈ ರೀತಿಯಾಗಿ ಬಹುಮಾನ ಕೊಡುವ ಉದ್ದೇಶದಿಂದ ಇದನ್ನು ಮಾಡುತ್ತಿದ್ದಾರೆಂಬ ಅಭಿಪ್ರಾಯವನ್ನು ವ್ಯಕ್ತಮಾಡಿದ್ದಾರೆ. ಅದು ಸರಿಯಲ್ಲ. ಇದನ್ನು ಮ್ಯಾಜಿಸ್ಟ್ರೇಟ್ ಅವರು ಕೊಡಬಹುದೆಂದು ಮಾಡಿದ್ದಾರೆ. ಸರ್ಕಾರದವರು ಈ ಕೆಲಸಮಾಡುತ್ತಾರೆಂದು ಹೇಳುವ ಉದ್ದೇಶವಿಲ್ಲ. ಮೇಲಾಗಿ ಇನಾಂ ಪಡೆಯುವ ಉದ್ದೇಶದಿಂದ ಕೆಲವು ಸುಳ್ಳು ಕೇಸುಗಳನ್ನು ಪೋಲೀಸಿನವರು ಮಾಡುತ್ತಾರೆ ಎಂದು ಮಾನ್ಯ ಶ್ರೀ ನಾಗಪ್ಪನವರೇ ಅಲ್ಲ, ಇನ್ನೂ ಕೆಲವು ವಿರೋಧಪಕ್ಷದ ಸದಸ್ಯರು ಹೇಳಿದರು.

ಶ್ರೀ ಎಂ. ಎನ್. ಕೃಷ್ಣನ್.—ಇವರು ಯಾವುದಾದರೂ ಜೈಲಿಗೆ ಹೋಗಿದ್ದಾರೆಯೇ, ಲಾಕಪ್ಪಿಗೆ ಹೋಗಿದ್ದಾರೆಯೇ, ಅಲ್ಲಿ ಚಾಟಿ ಏಟು ತಿಂದಿದ್ದಾರೆಯೇ ಒಂದು ದಿವಸ ಲಾಕಪ್ಪಿಗೆ ಹೋಗಿ ಬರಲಿ,ಗೊತ್ತಾಗುತ್ತದೆ.

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಇದು ಬಹಳ ಗಹನವಾದುದು. ನಮಗೆ ಜನತೆಯಲ್ಲಿ ನಂಬಿಕೆ ಇಲ್ಲ, ಇದನ್ನು ಜನರ ಅವಿಶ್ವಾಸ ಪಡೆಯುವುದಕ್ಕೆ ಮಾಡುತ್ತಿದ್ದೀರಿ ಎಂಬುದಾಗಿ ಕೆಲವರು ಹೇಳಿದರು. ಸರ್ಕಾರದ ಉದ್ದೇಶ ಆ ರೀತಿ ಇಲ್ಲ. ಯಾರ ಮೇಲೂ ಸಂಶಯವಿಲ್ಲ. ಏನಾಕಾರಣ, ಜನತೆಯ ಮೇಲೆ ಸಂಶಯಪಡಬೇಕು ಅವರ ಮೇಲೆ ಕೇಸು ಹಾಕಬೇಕೆಂಬ ಉದ್ದೇಶ ಸರ್ಕಾರಕ್ಕೆ ಇಲ್ಲ. ತಪ್ಪು ಮಾಡಿದಂಥವರಿಗೆ ಶಿಕ್ಷೆಮಾಡುವುದಕ್ಕೆ ಒಂದು ಕ್ರಮ ಇದೆ. ಅದಕ್ಕೆ ಕ್ರಿಮಿನಲ್ ಪ್ರೊಸೀಜರ್ ಕೋಡ್ ಇದೆ. ಸಾಮಾನ್ಯವಾಗಿ ಇಂಥ ಕೇಸುಗಳು ಇಷ್ಟಿವೆ ಎಷ್ಟು ಆಗಿವೆಯೆಂದು ಹೇಳುವುದಾದರೆ, 1967ರಲ್ಲಿ ಸುಮಾರು 31 ಕೇಸುಗಳು, 1968ರಲ್ಲಿ 12, ಇನ್ನೂ ಸಂಪೂರ್ಣವಾಗಿ ಅದರ ಬಗ್ಗೆ ವಿವರಗಳು ವರದಿಯಾಗಿಲ್ಲ. ಅದನ್ನು ಸದಸ್ಯರು ಅಪೇಕ್ಷಿಸಿದರೆ ಆಮೇಲೆ ತರಿಸಿ ತಿಳಿಸುತ್ತೇನೆ.

ಶ್ರೀ ಎಂ. ಎನ್. ಕೃಷ್ಣನ್.—ಎಷ್ಟು ಕೇಸುಗಳನ್ನು ಪತ್ತೆ ಹಚ್ಚಿ ಫೈನ್ ಹಾಕಿದ್ದೀರಿ ಮತ್ತು ಕನ್‌ವಿಕ್ಷನ್ ಮಾಡಿದ್ದೀರಿ!

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—12 ಕೇಸುಗಳಲ್ಲಿ ಕನ್‌ವಿಕ್ಷನ್ ಆಗಿವೆ. ಆದರೆ ಎಷ್ಟು ಡಿಸ್‌ಪೋಸ್ಡ್ ಆಗಿವೆ; ಎಷ್ಟು ಉಳಿದಿವೆ ಎಂಬ ಬಗ್ಗೆ ನನ್ನಲ್ಲಿ ಈಗ ಸಂಪೂರ್ಣ ಮಾಹಿತಿ ಇಲ್ಲ. ಅದು ಸಿಕ್ಕಿದರೆ, ಅದನ್ನು ಮಾನ್ಯ ಸದಸ್ಯರಿಗೆ ಕೊಡುತ್ತೇನೆ. ಇದರಲ್ಲಿ ಯಾವುದೇ ವಿಧವಾದ ಜನರನ್ನು ಹಿಂಸೆಮಾಡುವ ಉದ್ದೇಶದಿಂದ, ಪೋಲೀಸ್ ಆಫೀಸರುಗಳಿಗೆ ಪ್ರೋತ್ಸಾಹ ಕೊಡಬೇಕೆಂಬ ಉದ್ದೇಶದಿಂದ ಮಾಡಿರುವುದು ಏನೂ ಇಲ್ಲ. ಅಂತಹ ಅವ್ಯವಹಾರಗಳು ಇದ್ದರೆ, ಅವನ್ನು ತಡೆಗಟ್ಟುವುದಕ್ಕೆ ಪೋಲೀಸ್‌ನವರು ಇದ್ದಾರೆ. ಆ ರೀತಿ ಅವ್ಯವಹಾರ ಮಾಡುವವರಿಗೆ ತಕ್ಕ ಶಿಕ್ಷೆ ಮಾಡುವುದಕ್ಕೂ ಅಧಿಕಾರವಿದೆ.

ಅಧ್ಯಕ್ಷರು.—ಮಾನ್ಯ ವಾಟಾಳ್ ನಾಗರಾಜ್‌ರವರು ಒಂದು ಪ್ರಶ್ನೆ ಎತ್ತಿದ್ದಾರೆ, ಇದು ಸಾಮಾನ್ಯವಾಗಿ ರಾ ಅಂಡ್ ಆರ್ಡರ್ ಪ್ರಶ್ನೆ ಇವೆ, ಇಂತಹ ಪ್ರಸಂಗಗಳು ಪ್ರತಿ ದಿವಸ ನಡೆಯು

ತ್ತವೆ. ಇದು ಸಣ್ಣ ಲೋಕಲ್ ಮ್ಯಾಟರ್ ಆದ್ದರಿಂದ ನಿಲುವಳಿನೂಚನೆಗೆ ಸಂಬಂಧಪಟ್ಟ ವಿಷಯ ಆಗುವುದಿಲ್ಲ. ಆದ್ದರಿಂದ ನನ್ನ ಅನುಮತಿಯನ್ನು ಕೊಡಲಿಕ್ಕೆ ಆಗುವುದಿಲ್ಲ.

Leakage of S.S.L.C. Examination Question Papers

ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಏಪ್ರಿಲ್ ಒಂದರಿಂದ ಎಸ್. ಎಸ್. ಎಲ್. ಸಿ. ಪರೀಕ್ಷೆ ನಡೆಯುತ್ತಾ ಇದೆ; ನಾಳೆ ಜನರಲ್ ಸೈನ್ಸ್ ನಡೆಯಬೇಕಾಗಿದೆ. ಅದರ ಪ್ರಶ್ನೆಪತ್ರಿಕೆ ನನ್ನ ಕೈಯಲ್ಲಿ ಇದೆ; ಅದನ್ನು ಒಬ್ಬರು ನನ್ನ ಹತ್ತಿರ ಕಳುಹಿಸಿದ್ದಾರೆ. ನಾಳೆ ಆಗತಕ್ಕ ಪರೀಕ್ಷೆಯ ಪ್ರಶ್ನೆಪತ್ರಿಕೆಗಳು ಮಾರಾಟವಾಗುತ್ತಾ ಇವೆ. ಈ ರೀತಿ ಆಗುವುದರಿಂದ ಕೆಲವರಿಗೆ ಹೆಚ್ಚಿನ ನಂಬರುಗಳು ಬಂದು ಅವರು ಉತ್ತೀರ್ಣರಾಗುತ್ತಾರೆ. ಸೈನ್ಸ್ ಪತ್ರಿಕೆ ಲೀಕ್‌ಔಟ್ ಆಗಿದೆ, ಇದನ್ನು ಕಂಡುಹಿಡಿಯಬೇಕೆಂದು ಒಬ್ಬರು ನನಗೆ ನಾಳೆ ನಡೆಯತಕ್ಕ ಪ್ರಶ್ನೆಪತ್ರಿಕೆಯನ್ನು ಕಳುಹಿಸಿದ್ದಾರೆ. ಇದನ್ನು ನಾನು ತಮಗೆ ಕಳುಹಿಸುತ್ತೇನೆ. ತಾವು ಅಧ್ಯಕ್ಷರು ಇದನ್ನು ವಿದ್ಯಾಸಚಿವರ ಕಡೆಗೆ ಕಳುಹಿಸಿ ವಿಚಾರಣೆ ಮಾಡಿಸಬಹುದು. ಇದು ಒಂದು ದೊಡ್ಡ ರ್ಯಾಕೆಟ್ಟಿನೊಪಾದಿಯಲ್ಲಿ ನಡೆಯುತ್ತಿದೆ. ಹೀಗಾದರೆ ಇನ್ನು ಈ ಪರೀಕ್ಷೆಗಳಿಗೆ ಒಂದು ಪವಿತ್ರತೆ ಎಲ್ಲಿದೆ? ಹಿಂದೆ ಒಂದಾವರ್ತಿ ಹೀಗೇ ಆಗಿತ್ತು. ಈ ದಿವಸ ಈ ಪರೀಕ್ಷೆಗಳ ಪ್ರಶ್ನೆಪತ್ರಿಕೆಗಳು ಮಾರುಕಟ್ಟೆಗೆ ಮಾರಾಟಕ್ಕೆ ಬಂದಿವೆ. ಇದನ್ನು ನೋಡಿದರೆ ಸರ್ಕಾರ ತನ್ನ ಕರ್ತವ್ಯ ಪಾಲನೆಯಲ್ಲಿ ವಿಫಲಗೊಂಡಿದೆ ಎಂಬುದು ದೃಢಪಡುತ್ತದೆ. ಈ ವಿಚಾರದಲ್ಲಿ ಅಧ್ಯಕ್ಷರು ಸಂಬಂಧಪಟ್ಟ ಮಂತ್ರಿಗಳಿಂದ ಈ ಸಭೆಗೆ ಕೂಡಲೇ ಒಂದು ಹೇಳಿಕೆಯನ್ನು ಕೊಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

Mr. SPEAKER.—I have understood the importance of the point raised by hon. Leader of Opposition.

ಶ್ರೀ ಬಿ. ಪಿ. ಗಂಗಾಧರ್.—ಅಧ್ಯಕ್ಷರೇ, ತಾವು ಸ್ವಲ್ಪ ರೆಸ್ಯೂಂ ಮಾಡಿದರೆ ಒಂದು ವಿಚಾರವನ್ನು ತಮ್ಮಗಮನಕ್ಕೆ ತರಬೇಕಾಗಿದೆ...

ಅಧ್ಯಕ್ಷರು.—ಮಾನ್ಯ ಸದಸ್ಯರು ಏನೂ ಹೇಳುವುದು ಬೇಡ. ವಿದ್ಯಾ ಉಪಮಂತ್ರಿಗಳು ಏನಾದರೂ ಈ ವಿಷಯದಲ್ಲಿ ಹೇಳುವುದಿದ್ದರೆ ಹೇಳಬಹುದು.

ಶ್ರೀ ಬಿ. ಪಿ. ಗಂಗಾಧರ್.—ನಮ್ಮನೆ ಆ ವಿದ್ಯಾ ಉಪಮಂತ್ರಿಗಳನ್ನು ಏಕೆ ಕೇಳುತ್ತೀರೊ? I want to submit to the Chair that the Deputy Minister has not been delegated any powers. Therefore the Chair should ask the Hon. Minister Sri Shankara Gowda, to resign.

(Several members stood up and began to speak simultaneously)

Mr. SPEAKER.—I request all hon. Members to ressume their seats.

ಶ್ರೀ ಎಸ್. ಚನ್ನಯ್ಯ (ಕೃಷ್ಣರಾಜ).—ಮಂತ್ರಿಗಳು ಹೀಗೆ ಮಾತನಾಡುವುದು ಗೌರವವಲ್ಲ. ಅಂತಹ ಮಂತ್ರಿಗಳು ಈ ಸಭೆಯಲ್ಲಿ ಇರಬಾರದು. ಈ ಕಡೆಯ ಸದಸ್ಯರೊಬ್ಬರನ್ನು ಹೋಗೋ, ಬಾರೋ ಎಂದು ಕೇಳುತ್ತಿದ್ದಾರೆ. ಈ ಕಡೆಯವರೇನಾದರೂ ಅವರನ್ನು ಹೋಗೋ ಬಾರೋ ಎಂದು ಹೇಳಿದ್ದರೆ. ಅದು ತಪ್ಪು. ಅಂತಹವರು ಯಾವ ಪಕ್ಷದವರೇ ಆಗಿರಲಿ, ತಾವು ಅವರನ್ನು ಹೊರಗಡೆಗೆ ಕಳುಹಿಸಬಹುದು. ಯಾವಾಗಲೂ ಮಂತ್ರಿಗಳು ಸಾವಧಾನದಿಂದ ಇರಬೇಕು. ಒಂದುವೇಳೆ ಈ ಕಡೆಯ ಸದಸ್ಯರು ಹೆಚ್ಚು ಕಡಿಮೆ ಮಾತನಾಡಿದರೆ, ಮಂತ್ರಿಗಳಾಗಿರುವವರು ತಡೆದುಕೊಳ್ಳಬೇಕು. ಇಲ್ಲದಿದ್ದರೆ ಮಂತ್ರಿಗಳಾಗಬಾರದು. ಕಾಲಕ್ಕೆ ತಕ್ಕಂತೆ ಮಂತ್ರಿಯಾದವರು ಸಮಾಧಾನವಾಗಿರಬೇಕು. ಈ ಕಡೆಯವರು ಮಾತನಾಡಿದ್ದೂ ತಪ್ಪು. ಆ ರೀತಿ ಅವರು ಮಾತನಾಡಕೂಡದು. ಒಂದುವೇಳೆ ಆ ರೀತಿ ಮಾತನಾಡಿದ್ದರೆ, ಮಂತ್ರಿಗಳಾದವರು ಸಾವಧಾನ

(ಶ್ರೀ ಎಸ್. ಚನ್ನಯ್ಯ)

ವಾಗಿ ಸಮಾಧಾನವಾಗಬೇಕು. ಆಗ ಮಾತ್ರ ಮಂತ್ರಿಗಳಾದವರು ಮಂತ್ರಿ ಪದವಿಯಲ್ಲಿರುವುದಕ್ಕೆ ರಾಯಕ್ಕು. ಈ ಸಭೆಯಲ್ಲಿ ಈ ರೀತಿ ಅವರು ಮಾಡಬಾರದು. ನಾನು ಈ ಸಭೆಯಲ್ಲಿ 40-50 ವರ್ಷಗಳಿಂದಲೂ ನೋಡುತ್ತಿದ್ದೇನೆ. ಈ ರೀತಿ ಆಗಲಿಲ್ಲ. ಇದು ಆಗಬಾರದು.

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ (ವಿದ್ಯಾ ಶಾಖೆಯ ಉಪಮಂತ್ರಿಗಳು).—ಆ ಕಡೆ ಸದಸ್ಯರು ಸಿಕ್ಕಾಪಟ್ಟೆ ನಮ್ಮ ಮೇಲೆ ಮಾತನಾಡುವುದನ್ನು ಕೇಳುವುದಕ್ಕೆ ಮಂತ್ರಿಗಳಾಗಿ ನಾವು ಬರಲಿಲ್ಲ. ನಮಗೂ ಈ ಸಭೆಯ ಗೌರವ, ಘನತೆ ಏನಂಬುದು ಗೊತ್ತಿದೆ. ಆ ಕಡೆ ಸದಸ್ಯರು ಅಡಿದಂತೆಲ್ಲಾ ಇಲ್ಲಿ ಕೇಳುವುದಕ್ಕೆ ಮಂತ್ರಿಗಳು ಬಂದಿಲ್ಲ. ಆ ಕಡೆಯ ಸದಸ್ಯರಿಗೆ ಎಷ್ಟರಮಟ್ಟಿಗೆ ಆತ್ಮಗೌರವ ಇದಯೋ ಅದಕ್ಕಿಂತಲೂ ಹೆಚ್ಚಿಗೆ ನಮಗೂ ಇದೆ. ಮಾನ್ಯ ಶ್ರೀ ಚನ್ನಯ್ಯನವರ ಬಗ್ಗೆ ನಾನು ಹೇಳುತ್ತಾ ಇಲ್ಲ. ಈ ಸಭೆಯ ಘನತೆ, ಗೌರವ ವಿರುದ್ಧ ಮಾತನಾಡಿದಂಥ ಮಾನ್ಯ ಸದಸ್ಯರ ಬಗ್ಗೆ ಒಂದು ಕಂಟ್ರೋಲ್ ಇರಬೇಕು. ಆ ಮಾನ್ಯ ಸದಸ್ಯರಿಗೂ ಇಂತಹ ವಿಷಯಗಳನ್ನು ಇಲ್ಲಿ ಮಾತನಾಡುವಾಗ ಒಂದು ಕಂಟ್ರೋಲ್ ಬೇಕು.

ಶ್ರೀ ಎಸ್. ಚನ್ನಯ್ಯ.—ನನ್ನನ್ನು ಸ್ಪೀಕರನ್ನಾಗಿ ಮಾಡಿ. ನಾನು ಆಗ ಇಂತಹ ಸಂದರ್ಭಗಳಲ್ಲಿ ಎಲ್ಲರನ್ನೂ ಅಚೆಗೆ ಕಳುಹಿಸುತ್ತೇನೆ. ನಮ್ಮ ಕಡೆಯವರು ಮಾಡಿದ್ದು ಸರಿಯೆಂದೂ ಹೇಳುವುದಿಲ್ಲ, ನೀವು ಮಾಡಿದ್ದು ಸರಿಯೆಂದೂ ನಾನು ಹೇಳುವುದಿಲ್ಲ. ಯಾರು ತಪ್ಪು ಮಾಡಿದರೋ ಅವರಿಗೆ ಶಿಕ್ಷೆ ಆಗಲಿ. ಆದರೆ ಸಭೆಯಲ್ಲಿ ಈ ರೀತಿ ಆಗಬಾರದು. ಮಂತ್ರಿ ಆಗುವುದೇ ತಪ್ಪು. ಆದಮೇಲೆ ಬಿಸಿ ಮಾತುಗಳು ಬಂದರೂ ಸುಧಾರಿಸಿಕೊಂಡು ಹೋಗಬೇಕು.

ಶ್ರೀ ಎ. ಪಿ. ಅಪ್ಪಣ್ಣ (ಕೈಗಾರಿಕಾ ಶಾಖೆಯ ಉಪಮಂತ್ರಿಗಳು).—ಮಂತ್ರಿ ಆಗುವುದು ತಪ್ಪು ಎಂಬುದನ್ನು ನಾನು ಒಪ್ಪುವುದಿಲ್ಲ. I cannot hear everything and swallow it.

Sri S. SIVAPPA.—I raised a relevant and specific question before this House about the leakage of S. S. L. C. Examination question paper. The question paper of 3rd April 1968 is already in my hands sent by somebody. This information of leakage has been given to this House. I raised this question and I expected a fitting answer from the Minister concerned. In respect of that, an hon. Member from this side was explaining what should be done.

Mr. SPEAKER.—He asked him to resign.

Sri S. SIVAPPA.—If secrecy is not maintained, where is the sanctity attached to the question paper? The Minister is not in a position to explain. The Minister is so much touchy when a member of this side was just explaining as to what to do in this matter. That is a parliamentary way of doings things. If he is dissatisfied with that why should we sit here? I am asking whether the sanctity of the S. S. L. C. examination is maintained and whether the purity of the examination is maintained. The Minister has to take the responsibility on himself. If he is so conscious; he has to resign. It is a democratic procedure. I expect an answar from him.

Sri M. S. KRISHNAN (Malleswaram).—Sri Shivappa raised the issue of the leakage of question paper. He was about to finish. At that time you were pleased to request the Deputy Minister to make a statement. In between Sri Gangadhar said that the Deputy Minister need not make any statement and instead he should resign. Sri Vatal Nagarai was

saying that the Minister for Education should speak on this. In the meantime Sri Appanna, Deputy Minister, began shouting against Sri Vatal Nagaraj, who also stood up and said that he should resign. But Sri Appanna was directly telling Sri Vatal Nagaraj *Neenu Kuthugo*. He was addressing him in singular. He should not be so touchy. He is a Deputy Minister.

(*Sri N. M. Kotrabasaiah Sogi stood up*)

MR. SPEAKER.—He is on a point of order. Nobody should interrupt.

SRI M. S. KRISHNAN.—I am glad you said like that. The point is as far as Sri Appanna is concerned, he should not have uttered like that. He is also a Deputy Minister.

SRI A. P. APPANNA.—I have got questions in the Council. I may be permitted to go to the Council.

SRI M. S. KRISHNAN.—The Deputy Minister Sri Appanna being a Deputy Minister, apart from being a member of this House, has no business to address the other members of this House including Sri Vatal Nagaraj in singular. It is defamatory and incriminatory according to Rules 288 and 289. The Rule 288 reads as follows :

> "The Member while speaking shall not—(ii) make a personal charge against a member; (v) reflect upon the conduct of persons in high authority unless the discussion is based on a substantive motion drawn in proper terms; (vii) utter treasonable, seditious or defamatory words (viii) use his right of speech for the purpose of obstructing the business of the Assembly. "

Rule 289 reads as follows.

> "No allegation of a defamatory or incriminatory nature shall be made by a member against any person unless the member has given previous intimation to the Speaker and also to the Minister concerned so that the Minister may be able to make an investigation into the matter for the purpose of reply. "

Therefore it is highly defamatory and incriminatory and it is not according to the rules prescribed for the august House.

SRI H. N. NANJE GOWDA.—According to Rule 315, the words uttered by Sri Appanna should be expunged.

2-30 P.M.

SRI B. P. GANGADHAR.—Sir, I rise to a point of order under rule 311 read with rule 388. The Hon. Leader of the Opposition not only produced a question paper and submitted to the House that there is leakage of question papers but he also made a brief statement. Then you called upon the Deputy Minister to make a statement because facts are distorted here; I want to make this representation.

Mr. SPEAKER.—No representation can be made.

Sri B. P. GANGADHAR.—On a point of order, I want to say these points.

Mr. SPEAKER.—The hon. member is wasting the time of the House.

Sri B. P. GANGADHAR.—I am sorry that the Speaker is saying that I am wasting the time of the House. I was only submitting that more powers have not been delegated to the Deputy Minister and it may not be reasonable for us to expect him to make the statement in a matter like this which is a very serious one. The Minister concerned is Sri Shankara Gowda and he is not here to make a responsible statement. That is why I was just saying that if it is true, the Minister concerned must resign. That was misinterpeted to say that "Mr. Sogi must resign. I know fully well that Deputy Ministers have not been given all powers. Only restricted powers are given to them. I do not know why another Deputy Minister should start making violent gestures. He was very vehement and he was almost making defamatory speech and addressing an hon. Member Sri Vatal Nagaraj on this side in singular terms. He got into a battle-mood. He was probably remembering Gen, Kariappa. That sort of an attitude is highly deplorable. These things are going on under your very nose. Because he was violent, he deserves to be expelled from the House and for all the utterances he has made, he must be taught a good lesson.

ಶ್ರೀ ಕೆ ಪುಟ್ಟಸ್ವಾಮಿ (ನ್ಯಾಯ, ಕಾರ್ಮಿಕ ಮತ್ತು ಸಂಸದೀಯ ವ್ಯವಹಾರ ಶಾಖೆಗಳ ಮಂತ್ರಿಗಳು).—ಸ್ವಾಮಿ, ಎರಡು ಗಂಟೆಯಿಂದ ಮೂರು ಗಂಟೆಯವರೆಗೆ ಗೃಹಗತಿ ಚೆನ್ನಾಗಿಲ್ಲ ವೆಂದು ಕಾಣುತ್ತದೆ.

ಶ್ರೀ ಎಚ್. ಸಿದ್ದವೀರಪ್ಪ (ಹರಿಹರ).—ಮಾಟ ಮಾಡಿಸಿರಬಹುದು.

ಶ್ರೀ ಕೆ. ಪುಟ್ಟಸ್ವಾಮಿ.—ಮಾಟ ಮಾಡಿಸುವ ಶಕ್ತಿ ನನಗೆ ಇದ್ದರೆ ಎರಡು ಗಂಟೆಯಿಂದ ಮೂರು ಗಂಟೆಯವರೆಗೆ ಯಾರೂ ಮಾತನಾಡದಂತೆ ಮಾಟ ಮಾಡಿಸುತ್ತಿದ್ದೆ. ಮಾನ್ಯ ಸಿದ್ದವೀರಪ್ಪ ನವರು ಹಿಂದೆ ಗೃಹ ಮಂತ್ರಿಗಳಾಗಿದ್ದಾಗ ಪಾಟದ ಒಂದು ಕೇಸ್‌ನಲ್ಲಿ ಅಭಿರುಚಿ ತೆಗೆದುಕೊಂಡಿದ್ದರು. ಆದ್ದರಿಂದ ಅವರೇ ನಮಗೆ ಮಾಟ ಮಾಡಿಸುತ್ತಿದ್ದಾರೆಂದು ಕಾಣುತ್ತದೆ.

ಶ್ರೀ ಎಚ್. ಸಿದ್ದವೀರಪ್ಪ.—64 ವಿದ್ಯೆಗಳಲ್ಲಿ ಅದೂ ಒಂದು.

ಶ್ರೀ ಕೆ. ಪುಟ್ಟಸ್ವಾಮಿ.—ಆ ವಿದ್ಯೆಯಲ್ಲಿ ಪರಿಣತರಾದ ಒಬ್ಬರನ್ನು ತಾವು ಮುಂತ್ರಿಗಳಾಗಿದ್ದಾಗ ಹಿಡಿಸಿ ಶಿಕ್ಷೆ ಮಾಡಿಸಿದ್ದೀರಿ. ನನಗನ್ನಿಸುತ್ತದೆ, ಈ ಸಭೆಯ ಗೌರವ ಘನತೆಯ ದೃಷ್ಟಿಯಿಂದ ಆ ವಿದ್ಯೆ ನನಗೆ ಗೊತ್ತಿದ್ದರೆ 2 ರಿಂದ 3 ಗಂಟೆಯವರೆಗೆ ಸಮಾಧಾನವಿಂದ ವ್ಯವಹಾರ ನಡೆಯುವಂತೆ ಮಾಡಬಹುದಾಗಿತ್ತು ಎಂದು.

ಅಧ್ಯಕ್ಷರು.—ದಿನವೆರ್ಲಾ ಸಭೆ ಸಮಾಧಾನದಿಂದ ನಡೆಯುವಂತೆ ಏಕೆ ಮಾಡಿಸಬಾರದು ?

ಶ್ರೀ ಕೆ. ಪುಟ್ಟಸ್ವಾಮಿ.—ಆ ರೀತಿ ಮಾಡಿಸಿದರೆ ಅಧ್ಯಕ್ಷರನ್ನು ಹಿಡಿಯುವುದು ಕಷ್ಟವಾಗುತ್ತದೆ. ಮಾನ್ಯ ಶಿವಪ್ಪನವರು ಈ ಸಭೆಯ ಗಮನಕ್ಕೆ ತಂದಂಥ ವಿಚಾರ ಬಹಳ ಗಹನವಾಗಿದೆ. ಇದು ಬಹಳ ದೊಡ್ಡ ರೋಗವಾಗಿದೆ. ಇದು ನಮ್ಮ ರಾಜ್ಯಕ್ಕೇ ಬಂದಿರುವುದು ಅಲ್ಲ. ಇಂತಹ ಪಿಡುಗು ಆಗಾಗ್ಗೆ ಬರುತ್ತದೆ. 1963ರಲ್ಲಿ ಇದೇ ರೀತಿ ಪ್ರಶ್ನೆ ಪತ್ರಿಕೆಗಳು ವಿಧಾನಸೌಧದ ನುತ್ತಲೂ ಓಡಾಡಿದಾಗ ಪುನಃ ಪರಿಕ್ಷೆಯನ್ನು ಮಾಡಬೇಕಾಯಿತು. ಈಗ ಮತ್ತೆ ಮಾನ್ಯ ಸದಸ್ಯರು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಈ ವಿಚಾರದಲ್ಲಿ ಸರ್ಕಾರ ಗಮನ ಕೊಟ್ಟು ಪ್ರಕಟವಾಗಿರುವ ಆ ಪ್ರಶ್ನೆ

ಪತ್ರಿಕೆ ನಿಜವಾದ ಪ್ರಶ್ನೆ ಪತ್ರಿಕೆಯಾಗಿದ್ದರೆ ಏನು ಕ್ರಮ ಕೈಗೊಳ್ಳಬೇಕು ಎಂಬುದನ್ನು ನೋಡ ಬೇಕಾಗುತ್ತದೆ ಮತ್ತು ಮುಂದಿನ ದಿನಗಳಲ್ಲಿ ನಡೆಯುವ ಬೇರೆ ಬೇರೆ ಪ್ರಶ್ನೆ ಪತ್ರಿಕೆಗಳ ವಿಚಾರದಲ್ಲಿ ಎಚ್ಚರಿಕೆಯ ಕ್ರಮ ಕೈಕೊಳ್ಳಬೇಕಾಗುತ್ತದೆ. ಅದನ್ನು ಕೈಕೊಳ್ಳುತ್ತೇವೆ.

ಇನ್ನು ಒಂದು ವಿಚಾರವನ್ನು ಈ ಸಭೆಗೆ ವಿನಂತಿ ಮಾಡಿಕೊಳ್ಳುತ್ತೇನೆ. ನಾನು ಹೀಗೆ ಹೇಳು ತ್ತೇನೆ ಎಂದು ಮಾನ್ಯ ಸದಸ್ಯರು ಯಾರೂ ಕೋಪ ಮಾಡಿಕೊಳ್ಳಬಾರದು. ಶ್ರೀಮಾನ್ ಗಂಗಾ ಧರ್‌ರವರು ಹೇಳುವಂತೆ ಇಲ್ಲಿ ನಡೆದುಕೊಂಡ ರೀತಿ ಕಂಡೆಮ್ನಬರ್ ಆಗಿರಬಹುದು.

ಶ್ರೀ ಬಿ. ಪಿ. ಗಂಗಾಧರ್.—ಹೋಗೋ, ಬಾರೋ ಎಂದು ಹೊಡೆಯುವುದಕ್ಕೇ ಬರುತ್ತಾರಲ್ಲ, ಸ್ವಾಮಿ.

ಶ್ರೀ ಕೆ. ಪುಟ್ಟಸ್ವಾಮಿ.—ಶ್ರೀಮಾನ್ ಚನ್ನಯ್ಯನವರು ಇಲ್ಲಿ ಒಂದು ಮಾತು ಹೇಳಿದರು. ಅವರು ಹೇಳಿದುದನ್ನು ನಾನೂ ಕೂಡ ಒಪ್ಪುತ್ತೇನೆ. ನಾವು ಕೂಡ ಮನುಷ್ಯರು, ನಾವೇನೂ ದೇವತೆಗಳಲ್ಲ. ನಮಗೂ ಹೆಚ್ಚು ಸಹನೆ ಇದೆ ಎಂದು ಭಾವನೆ ಮಾಡಿಕೊಂಡಿಲ್ಲ. ಸ್ವಾಭಾವಿಕವಾಗಿ ಯಾರು ಅಧಿಕಾರದಲ್ಲಿದ್ದಾರೋ ಅವರ ಚರ್ಮವೂ ಕೂಡ ಸ್ವಲ್ಪ ರಫ್ ಆಗಿರುತ್ತದೆ. ಇಲ್ಲಿ ಕುಳಿತು ನುಮಾರು ಒಂದೂವರೆ ತಿಂಗಳಿಂದಲೂ ನಮಗೂ ಕೂಡ ನಮ್ಮ ತಾಳ್ಮೆ ಮೀರಿ ಹೋಗಿದೆ ಎಂದು ಹೇಳಿ ದರೆ ಅದು ಅತಿಶಯೋಕ್ತಿ ಎಂದು ಯಾರೂ ಭಾವನೆ ಮಾಡಿಕೊಳ್ಳಬೇಕಾಗಿಲ್ಲ. ಮಾತು ಎತ್ತಿದರೆ ರಾಜೀನಾಮೆ ಕೊಡಬೇಕು ಎಂದು ಹೇಳುವುದು ಆ ಕಡೆಯವರಿಗೆ ಅಜನ್ಮಸಿದ್ಧವಾದ ಹಕ್ಕು, ಅಧಿ ಕಾರದಲ್ಲಿರಲು ನಾವು ಅನರ್ಹರು, ಮತ್ತು ನಿಮ್ಮ ಕೆಲಸಗಳನ್ನು ಬಿಟ್ಟು ಹೋಗಿ ಎಂದು ಹೇಳಿದರೂ ನಾವು ಕೋಪಮಾಡಿಕೊಳ್ಳುವುದಿಲ್ಲ. ತಮ್ಮ ಮುಂದೆ ಎಷ್ಟು ಬೇಕಾದರೂ ಹೇಳಲಿ, ಎಷ್ಟು ಬೇಕಾ ದರೂ ತೆಗಳಲಿ, ಅದಕ್ಕಾಗಿ ಸ್ವಾಭಾವಿಕವಾಗಿ ಅವರಿಗೆ ಬಹಳ ಅವಕಾಶ ಕೊಡುತ್ತಿದ್ದೀರಿ. ನಾವೂ ಅದಕ್ಕೆ ಉತ್ತರ ಕೊಡುತ್ತೇವೆ. ಅವರು ಯಾವ ನಾಣ್ಯದಲ್ಲಿ ಕೊಟ್ಟಿರುತ್ತಾರೋ ಅದೇ ನಾಣ್ಯ ವನ್ನೇ ನಾವು ವಾಪಸು ಕೊಡುವಾಗ ಅದಕ್ಕೆ ಕೋಪಮಾಡಿಕೊಳ್ಳಬಾರದು.

ಶ್ರೀ ಕೆ. ಎಚ್. ಪಾಟೀಲ್ (ಗದಗ).—ತೆಗಳಲಿ ಎಂದರೆ ಬಗಳಲಿ ಎಂದಾಗುತ್ತದೆ. ನಾವು ಹಾಗೆ ಹೇಳಿದರೆ ಸರಿಯಲ್ಲ ಎನ್ನುತ್ತಾರೆ.

ಶ್ರೀ ಕೆ. ಪುಟ್ಟಸ್ವಾಮಿ.—ಶ್ರೀಮಾನ್ ಕೆ. ಎಚ್. ಪಾಟೀಲರವರು ಗದಗ್‌ನಿಂದ ಬಂದವರು. ನಾನೂ ಕೂಡ ಗದುಗಿನ ನಾರಾಯಣಪ್ಪನವರ ಭಾಷೆಯನ್ನು ಓದಿ ತಿಳಿದಿದ್ದೇನೆ. ತೆಗಳಲಿ ಎನ್ನು ವುದಕ್ಕೆ ಏನು ಅರ್ಥ ಇದೆ ಎನ್ನುವುದು ನನಗೂ ಗೊತ್ತಿದೆ. ಅವರು ಬೇರೆ ಒಂದು ಶಬ್ದ ಏನು ಹೇಳಿದರು ಅದಕ್ಕೆ ಒಂದಕ್ಕೊಂದು ಅಜಗಜಾಂತರ ವ್ಯತ್ಯಾಸ ಇದೆ. ನಾ ನೇ ನಾ ದ ರೂ ಭಾಷಣ ಮಾಡುವಾಗ ಅಂತಹ ಪದಗಳನ್ನು ಉಪಯೋಗಿಸಿದ್ದರೆ ಅದನ್ನು ವಾಪಸ್ಸು ತೆಗೆದು ಕೊಳ್ಳುವುದಕ್ಕೆ ಸಿದ್ಧನಾಗಿದ್ದೇನೆ. ಶ್ರೀಮಾನ್ ಗಂಗಾಧರ್‌ರವರಲ್ಲಿ ನಾನು ವಿನಂತಿ ಮಾಡುವುದು ಏನೆಂದರೆ ಅವರು ಒಳ್ಳೆಯ ಖ್ಯಾತಿ ಪಡೆಯುವಂತಹವರು ಮತ್ತು ವಕೀಲರೂ ಆಗಿದ್ದಾರೆ. ಶ್ರೀಮಾನ್ ಶಿವಪ್ಪನವರು ಇಲ್ಲಿ ಹೇಳಿದುದಕ್ಕೆ ಉತ್ತರ ಕೊಡುವುದಕ್ಕೆ ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಎಂದು ಹೇಳಿ ದರು. ಇದರ ಅಂತರ್ಯ ನನಗೆ ಅರ್ಥವಾಗುತ್ತಿಲ್ಲ. ನಾನೇ ಇಂದು ಮಿನಿಸ್ಟರ್, ವಿತೌಟ್ ಪೋರ್ಟ್‌ಫೋಲಿಯೋ ಎಂದು ಆಗಿರಬಹುದು. ಆದರೆ ನನ್ನ ಜವಾಬುದಾರಿ ಸರ್ಕಾರದ ಪಕ್ಷವಾಗಿ ಯಾರ ಪರವಾಗಿ ಬೇಕಾದರೂ ಇಲ್ಲಿ ಉತ್ತರಕೊಡಬಹುದು. ನಮ್ಮ ಕೌನ್ಸಿರ್ ಆಫ್ ಮಿನಿಸ್ಟರು ಗಳಲ್ಲಿ ಇರುವ 29 ಜನರಲ್ಲಿ ಯಾವ ಮಂತ್ರಿಗಳು ಬೇಕಾದರೂ ಇನ್ನೊಬ್ಬರ ಪರವಾಗಿ ಇಲ್ಲಿ ಉತ್ತರ ಕೊಡಬಹುದು. ಶ್ರೀಮಾನ್ ಹೋಗಿಯವರು ನಾನು ಇಲ್ಲದ ವೇಳೆಯಲ್ಲಿ ನನ್ನ ಪರವಾಗಿ ಉತ್ತರ ಕೊಡಬಹುದು, ಇಲ್ಲವೇ ಮಾನ್ಯ ಮುಖ್ಯಗಳ ಮಂತ್ರಿ ಪರವಾಗಿ ಇಲ್ಲಿ ಉತ್ತರ ಕೊಡಬಹುದು. ಅವ ರಿಗೂ ಈ ಅಧಿಕಾರ ಇದೆ. ಸರ್ಕಾರದ ಪರವಾಗಿ ಉತ್ತರ ಕೊಡುವುದೇ ತಪ್ಪು ಎಂದರೆ ಅದು ಸರಿಯಲ್ಲ. ಮತ್ತೆ ಅವರು ಹೇಳಿದರು ಉತ್ತರ ಕೊಡಲಿಕ್ಕೆ ಅವರು ಯಾರು ಎಂದು ಈ ಗಲಾಟೆ ಎಲ್ಲಿಂದ ಶುರುವಾಯಿತು ಎಂದರೆ ಶ್ರೀಮಾನ್ ವಾಟಾಳ್ ನಾಗರಾಜ್ ಅವರು ಚಳುವಳಿಗಾರರು. ಇಲ್ಲಿಯೂ ಕೂಡ ಚಳುವಳಿ ಮಾಡುತ್ತಾರೆ. ಇಲ್ಲಿ ಅವರು ಏನು ಹೇಳಿದರು ಎಂದರೆ "The Minister is incompetent to reply and he must resign" ಎಂದು. ಅದು ಏನಾ ಗುತ್ತದೆ ಎಂದರೆ ನಾವೂ ಕೂಡ ಉಪ್ಪು, ಖಾರ ತಿಂದು ಬಂದಿದ್ದೇವೆ, ಸಕ್ಕರೆ ತಿಂದು ಏನೂ ಬಂದಿಲ್ಲ.

Sri H. SIDDAVEERAPPA.—Is there anything unparliamentary in what Sri Vatal Nagaraj has said ?

Sri K. PUTTASWAMY.—I never said it is unparliamentary. I agree with the hon'ble Member Sri Siddaveerappa that it is definitely not unparliamentary, but it is not complimentary. It is human nature to accept some complimentary remarks. The hon'ble Members of the Opposition, in season and out of season are hurling uncomplimentary words at us and sometime or other they must extend complimentary words also. Anyway I regret very much for what has happened. I would make an appeal to all members not to lose temper on the floor of the House. It applies to all members whether on this side or the other side. May I appeal to the hon'ble Members of the Opposition not to try our patience ?

Sri H. SIDDAVEERAPPA.—I am only making a request that somehow or other the dignity, decorum and decency of the House must be maintained and it is accepted by all sides. We are not opposed to it. If you go to the Mother of Parliaments, you will see that tempers are lost to such an extent that even shoe beating has taken place. Fist fighting and all that has taken place. But we must credit ourselves that we do not go to that extent. What I am saying is, by all means, advise us. But if you see the proceedings you will find, how often you have called to order Sri Vatal Nagaraj, Sri Azeez Sait, may be, for justifiable reasons ; but at least only once, when such things happen from the other side, why not your rod fall on them ? I want to know this. If the rod is swayed on both sides, probably everything will be all right.

Sri S. BANGARAPPA.—On a point of order.

Mr. SPEAKER.—The member must complete it in one minute.

Sri B. P. GANGADHAR.—The Minister was given more time to explain. But when the hon. Member wants to raise a point of order, you fix some time limit. You have been restricting every one of us. When the hon. member wants to make a full impression of the matter and convince the Chair, you must give him sufficient time.

Mr. SPEAKER.—As regards this point, the Speaker can put a time limit, because things cannot go on for any length of time. Under the residuary powers, whenever a point of order is raised with reference to a rule, I can say that it should be over in a minute or two and this should be taken as a procedure hereafter.

†ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ, ಈ ದಿವಸ ಅನೇಕ ಮಾನ್ಯ ಸದಸ್ಯರು ಈಗಾಗಲೇ ಅನೇಕ ಕ್ರಿಯಾಲೋಪಗಳನ್ನು ಎತ್ತಿದ್ದಾರೆ. ನಾನಾದರೂ ಕೂಡ ಮಾನ್ಯ ಕೃಷ್ಣನ್ ಅವರು ಕೋಟ್ ಮಾಡಿರತಕ್ಕ ರೂಲ್ ಪ್ರಕಾರವೇ ಕ್ರಿಯಾಲೋಪವನ್ನು ಎತ್ತುವುದಕ್ಕೆ ಇಷ್ಟಪಡುತ್ತೇನೆ. ಆ ವಿಷಯದಲ್ಲಿ ಮಾತನಾಡುತ್ತಾ ಮಾನ್ಯ ಪುಟ್ಟಸ್ವಾಮಿಯವರಿಗೆ ನಾನು ಅಭಾರಿಯಾಗಿದ್ದೇನೆ ಎರಡು ವರ್ಷಗಳಲ್ಲಿ ಈ ಸಭೆಯಲ್ಲಿ ಮಾತನಾಡಿದ ಬಗ್ಗೆ ಈವೊತ್ತು ಅವರು ಮಾತನಾಡಿದ್ದರಲ್ಲಿ ಕೊನೇ ಅರ್ಧ ಭಾಗವನ್ನು ಮಾತ್ರ ನಾನು ಮೆಚ್ಚುತ್ತೇನೆ. ಅದು ಯಾವುದೆಂದರೆ ನಾವು ಅನ್ ಪಾರ್ಲಿಮೆಂಟರಿ ಶಬ್ದಗಳನ್ನು ಉಪಯೋಗ ಮಾಡಬಾರದು, ಯಾರೇ ಆಗಲೀ ಈ ಕಡೆಯವರೇ ಆಗಲೀ, ಆ ಕಡೆಯವರೇ ಆಗಲೀ ಆ ರೀತಿ ಉಪಯೋಗ ಮಾಡಬಾರದು ಎನ್ನುವ ವಿಷಯ ಸಭೆಯಲ್ಲಿ ಯಾರೂಕೂಡ ಚೆಂಪಶ್ ಕಳೆದುಕೊಳ್ಳಬಾರದು ಎನ್ನುವುದು ಒಂದು ವಿಷಯ, ಬಹಳ ಮೆಚ್ಚತಕ್ಕ ಸಂಗತಿಗಳು. ಅನ್‌ಪಾರ್ಲಿಮೆಂಟರಿ ಅಲ್ಲದೆ ಇದ್ದರೂ ಅನ್‌ಕಾಂಪ್ಲಿಮೆಂಟರಿ ಪದಗಳನ್ನೂ ಬಳಸಬಾರದು ಎಂದು ಅವರು ಹೇಳಿರುವುದು ಮೆಚ್ಚತಕ್ಕ ಸಂಗತಿ. ಈ ಸಂದರ್ಭದಲ್ಲಿ

ನಾನು ಸಾಂದರ್ಭಿಕವಾಗಿ ಪ್ರಸ್ತಾಪ ಮಾಡುವುದು ಏನೆಂದರೆ, ಶ್ರೀಮಾನ್ ಶಿವಪ್ಪನವರು ಎತ್ತಿರ ತಕ್ಕ ಪ್ರಶ್ನೆ ಪತ್ರಿಕೆಗಳು ಪರೀಕ್ಷೆಯಾಗುವುದಕ್ಕೆ ಮೊದಲೇ ಹೊರಗಡೆ ಬಂದು ಎಲ್ಲರಿಗೂ ಸಿಕ್ಕಿವೆ. ಮಾರ್ಕೆಟ್ಟಿನಲ್ಲಿ ಸಿಕ್ಕುತ್ತವೆ ಎಂದು ಹೇಳಿ ಇದು ಒಂದು ರ್ಯಾಕೆಟ್ ಎನ್ನುವ ಅಭಿಪ್ರಾಯವನ್ನು ವ್ಯಕ್ತ ಮಾಡಿದರು. ಮಾನ್ಯ ಉಪಮಂತ್ರಿಗಳು ಏನು ಉತ್ತರ ಹೇಳುತ್ತಾರೆಂಬುದನ್ನು ಕೇಳೋಣ ಎಂದು ತಾವು ಹೇಳಿದಾಗ ಶ್ರೀ ಗಂಗಾಧರ್ ಅವರು ಹೇಳಿದರು, Powers have not been delegated by the Minister concerned to the Deputy Minister and therefore he has no *locus standi* to say.....ಎನ್ನುವ ಅರ್ಥದಲ್ಲಿ ತಿಳಿಸಿದರು. ಶ್ರೀಮಾನ್ ಪಾಟಾಳ್ ನಾಗರಾಜ್ ಅವರೂ ಮಾತನಾಡಿದರು, ಶ್ರೀಮಾನ್ ಅಪ್ಪಣ್ಣನವರೂ ಮಾತನಾಡಿದರು. ಶ್ರೀಮಾನ್ ಪುಟ್ಟಸ್ವಾಮಿಯವರು ಇದರ ಬಗ್ಗೆ ಒಂದು ಮಾತನ್ನು ಹೇಳಿದರು. ಶ್ರೀ ಅಪ್ಪಣ್ಣನವರು ಸ್ವಲ್ಪ ಹಿಡಿತದಲ್ಲಿರಬೇಕಾಗಿತ್ತು. ಈ ಕಡೆಯಲ್ಲಿಯೂ ಕೆಲವರು ಅಂದಿರಬಹುದು. "ಕೂತುಕೋ, ನೀನು ಏನು ಹೇಳಬೇಕಾಗಿಲ್ಲ" ಎಂದು ಏಕವಚನದಲ್ಲಿ ಪದಗಳ ಪ್ರಯೋಗ ಮಾಡುವುದು ನಲ್ಲದು ಎನ್ನುವ ಅಭಿಪ್ರಾಯವನ್ನು ಎಲ್ಲರೂ ಒಪ್ಪಬೇಕಾದ್ದೇ. ಹಾಗೆಯೇ ಈ ಕಡೆಯವರು ಕೂಡ ಮಾತನಾಡಿದರೆ ತಪ್ಪು ಎಂದಾಗುತ್ತದೆ. ಅಧ್ಯಕ್ಷರು ಅಂಥ ಮಾತುಗಳನ್ನು ವಾಪಸು ತೆಗೆದುಕೊಳ್ಳಬೇಕು ಎಂದರೆ ವಾಪಸು ತೆಗೆದುಕೊಳ್ಳಬೇಕಾಗುತ್ತದೆ. ಶ್ರೀ ಅಪ್ಪಣ್ಣನವರು ಮತ್ತು ಈ ಕಡೆಯವರು ಯಾರಾದರೂ ಅಂದಿದ್ದರೆ ಅದನ್ನು ಕೂಡ ವಾಪಸ್ಸು ತೆಗೆದುಕೊಳ್ಳಬಹುದು. ಒಂದು ವೇಳೆ ಬೇಡ ಅದು ಅಲ್ಲಿಗೆ ಹೋಗಲಿ ಎಂದು ಬೇಕಾದರೂ ಬಿಡಬಹುದು.

ಈ ಸಂದರ್ಭದಲ್ಲಿ ಒಂದು ಮಾತನ್ನು ಗಂಗಾಧರ್ ಅವರು ಹೇಳಿ ಮಂತ್ರಿಗಳು ರಾಜಿನಾಮೆ ಕೊಡಬೇಕು ಎಂದು ಹೇಳಿದಾಗ ಅಧ್ಯಕ್ಷರು ಹೇಳಿದರು, ಮಂತ್ರಿಗಳ ರಾಜಿನಾಮೆಗೆ ಏಕೆ ಒತ್ತಾಯ ಮಾಡುತ್ತೀರಿ ಎಂದು. ನಾನು ಅಧ್ಯಕ್ಷರಿಂದ ಒಂದು ಮಾತನ್ನು ಪಡೆಯುವುದಕ್ಕೆ ಇಷ್ಟ ಪಡುತ್ತೇನೆ. ಈ ಸಭೆಯಲ್ಲಿ ನಾವು ಸದಸ್ಯರಾಗಿ ಬಂದ ಮೇಲೆ ವಿದ್ಯಾ ಇಲಾಖೆಯು ಅಥವಾ ಯಾವುದೇ ಇಲಾಖೆಯು ತಪ್ಪುಗಳು ಕಂಡುಬಂದ ಮೇಲೆ ಅದರ ಬಗ್ಗೆ ಪ್ರಸ್ತಾಪ ಮಾಡಬೇಡವೇ? ನಾಳೆಯ ದಿನ ಪರೀಕ್ಷೆಗೆ ಇರುವ ವಿಷಯದ ಪ್ರಶ್ನೆ ಪತ್ರಿಕೆಗಳು ಮುಂಚಿತವಾಗಿ ಬೆಂಗಳೂರು ನಗರದಲ್ಲಿ ಮಾರ್ಕೆಟ್ಟಿನಲ್ಲಿ ಸಿಕ್ಕುತ್ತವೆ ಎಂದರೆ ವಿದ್ಯಾ ಇಲಾಖೆಯ ದುರಾಡಳಿತ ಎಷ್ಟರಮಟ್ಟಿಗೆ ಇದೆ, ಅಲ್ಲಿ ಲಂಚದ ಹಾವಳಿ ಎಷ್ಟರಮಟ್ಟಿಗೆ ಇದೆ ಎನ್ನುವುದು ಎಲ್ಲರಿಗೂ ತಿಳಿಯುತ್ತದೆ. ಈ ಸದನಕ್ಕೆ ನಾವು ಬಂದ ಮೇಲೆ ವಿದ್ಯಾ ಇಲಾಖೆಯಲ್ಲಿ ಇಷ್ಟೊಂದು ತಪ್ಪುಗಳಾಗಿದ್ದರೂ ಪ್ರಶ್ನೆ ಪತ್ರಿಕೆಗಳು ಹೊರಗೆ ಬಂದಿದ್ದರೂ ಮಂತ್ರಿಗಳು ರಾಜಿನಾಮೆ ಕೊಡಬೇಕು ಎಂಬ ಹೇಳುವ ಅಧಿಕಾರ ವಿದೆಯೇ ಇಲ್ಲವೇ ಎನ್ನುವ ಪ್ರಶ್ನೆ ಬರುತ್ತದೆ. ಅಧ್ಯಕ್ಷರು ಆ ಮಾತನ್ನು ಏಕೆ ಹೇಳಿದರು ಎನ್ನುವುದು ಗೊತ್ತಿಲ್ಲ. ನಾನು ಅಧ್ಯಕ್ಷರಲ್ಲಿ ನಮ್ರತೆಯಿಂದ ಕೇಳುತ್ತೇನೆ. ತಾವು ಆ ಮಾತನ್ನು ಹೇಳುವುದಕ್ಕೆ ಕಾನೂನು ಪ್ರಕಾರ ಅಧಿಕಾರವಿದೆಯೇ? ಆ ರೀತಿ ಅಧಿಕಾರವಿದೆ ಎಂದು ನಾನು ಭಾವನೆ ಮಾಡುವುದಿಲ್ಲ. ಎರಡನೆಯದು ತಮಗೆ ಅಧಿಕಾರವಿದ್ದರೂ ಪ್ರಶ್ನಪತ್ರಿಕೆ ಲೀಕ್‌ಔಟ್ ಆದಾಗ ವಿಷಯವನ್ನು ಒತ್ತಾಯಮಾಡಲು ಸರಿಯೆಂಬುದನ್ನು ತಾವೂ ಒಪ್ಪುತ್ತೀರಿ ಎಂದು ನಾನು ಭಾವಿಸುತ್ತೇನೆ. ಶಿವಪ್ಪನವರು ಪ್ರಶ್ನೆಪತ್ರಿಕೆಯನ್ನು ಕೊಡುವರು. ನಿಜವಾಗಿಯೂ ಪ್ರಶ್ನೆ ಪತ್ರಿಕೆಯು ಲೀಕ್ ಆಗಿರುವುದು ಸರಿಯೆಂದು ಗೊತ್ತಾದರೆ ಸರಕಾರ ರಾಜೀನಾಮೆ ಕೊಡಬೇಕು. ನಮಗಿರುವ ಕೇಳುವ ಹಕ್ಕನ್ನು ಮೊಟಕು ಮಾಡುವುದಾದರೆ ನಾವೇಕೆ ಈ ಸಭೆಗೆ ಬರಬೇಕು ಎಂಬುದೇ ನನ್ನ ಕ್ರಿಯಾಲೋಪ.

MR. SPEAKER.—I agree with the sentiments expressed by the hon. Member Sri Channaiah, the Hon. Minister for Parliamentary Affairs, the hon. Member Sri Siddaveerappa and others. They made certain observations over the tension in the House; I very much regret that what has happened does not do credit to anybody. Points were raised by Members on this side as well as on that side; tempers were lost and utter confusion prevailed in the House. When there was utter confusion in the House, what can the Presiding Officer do? In that confusion, I have not been able to follow or hear anything. If the members want the Presiding Officer to be effective, I request all the hon. Members to maintain calm atmosphere so that the Presiding officer may be able to hear everything and take such action as the

(MR. SPEAKER)

rules require. When it was not possible to hear anything, to listen to anything and when confusion reigned supreme, nobody can help. I request the hon. Members to avoid such situations hereafter at least.

I found Members from this side and that side rising, talking without permission and not showing obedience to the Chair. I am sorry if such behaviour is resorted to here, it does not redound to the credit of any hon. Member. I am saying this irrespective of considerations of groups or this party or that party. The Hon. House knows and the Leaders of both the sides know and it is a well-known fact that there are some hon. Members who frequently rise, disobey the Chair in season and out of season, create confusion, flout rules and are never amenable to discipline.

The Hon. Leader of the Opposition wanted some information on a certain point. The point raised by him was a very important one and nobody has doubted it. He stated that a certain Question Paper of S.S.L.C. was on sale, etc. The leakage of questions was certainly a very important issue and, therefore, I wanted to know from the Hon. Deputy Minister for Education what he had to say. The issue was raised in the House suddenly and so the Hon. Deputy Minister had no notice of it. Still, I wanted to request the Hon. Deputy Minister to let us know whether he was prepared to make a statement on the important issue. But when I was still on my legs, the hon. Member Sri B. P. Gangadhar chose to rise, ignored my request to him to resume his seat and stated that the Deputy Minister was not competent to make a statement and that the Minister should resign. When I called upon the Hon. Deputy Minister and asked him whether he had anything to say, it was for the Deputy Minister to reply. My point is: when I called upon the Hon. Deputy Minister to intimate whether he could make a statement, and when I was still on my legs, the hon. Member Sri Gangadhar intervened and remarked that the Deputy Minister was not competent to make a statement and that the Minister should resign. What he stated was not in the proper context and it was improper and highly worng. That should not happen. When the Chair is giving direction and is still standing, how can any Member suddenly stand up and make remarks even without listening to what the Government has to say? I think certain standards have to be maintained in the House.

In democracy, there should be organised debate. Any Member is at liberty to make any criticisms but everybody has to observe decorum and certain well laid down procedures. Let each side have patience to listen without interruption to the other side. If an hon. Member of the ruling party is speaking, the members on the Opposition side should give him a patient hearing. Similarly, when a member on the Opposition side, senior or junior, is addressing the House, let the Members of the ruling party hear him patiently and not interrupt him. That is a proper debate. Debate means organised speaking, orderly behaviour and organised listening. Unless this is done, no democratic or parliamentary procedure is likely to succeed. I conclude by saying that it

was not at all correct on the part of the hon. Member Sri Gangadhar to have stood up when I was still on my legs and to make remarks that the Hon. Deputy Minister for Education should not make a statement and the Hon. Minister should resign.

Sri B. P. GANGADHAR.—You may kindly peruse the records before making observations about me. If you go through the records, you will know that I am not incorrect.

Mr. SPEAKER.—It was not correct on the part of the Member to have stood up when I was standing. Secondly, it was not proper on the part of the member to ask the Deputy Minister not to make a statement. Sri Bangarappa will take note of what I said in this particular context. I heard what Sri Gangadhar stated and I also observed his conduct. Therefore, hereafter I request hon. Members very earnestly to follow the rules strictly and always address the Chair and thus avoid exchanges among themselves. If anything wrong is done, and if I am not able to hear on account of prevalence of utter confusion, I cannot take any decision. A decision must be taken only out of personal knowledge and hearing. When I cannot hear, and know what has transpired what can I do ? I become helpless.

The Hon. Minister for Parliamentary Affairs has made some humorous references and that is heartily reciprocated by the other side. A very good atmosphere is created. I do not want to spoil that atmosphere. I request the hon. Members to co-operate with me and see that such episode is not repeated. If the Hon Minister for Parliamentary Affairs wants to make a statement, he may do so. Perhaps he will make a statement after some time.

Now I call upon the Hon. Deputy Minister to make a statement.

Sri K. H. PATIL.- I rise to a point of order. Sri Shivappa has produced some question paper before the House. I have nothing to say regarding the words that have been used which do not bring respect to the House as well as to the Speaker. The Council of Ministers should be responsible to this House. They should not shirk to shoulder this responsibility. When they are collectively responsible, we as members of this House, have a right to question their integrity and honesty and demand from these Ministers their resignation. I am here to support Sri Sivappa's point that this House can demand the resignation of the Minister concerned, if not of the whole Ministry.

Mr. SPEAKER.—The Hon'ble Leader of the Opposition has brought out a point. We do not know whether the leakage is there and if there be leakage, who is responsible for it ? When a judgment is to be passed by this House, let it be done on the basis of full facts.

3-00 P.M.

Sri K. PUTTASWAMY.—Before the House rises, we will give that information.

†ಶ್ರೀ ಬಿ. ದೊಡ್ಡಬೋರೇಗೌಡ (ಶ್ರೀರಂಗಪಟ್ಟಣ).—ಸ್ವಾಮಿ, ಅಧ್ಯಕ್ಷರೇ, ಒಂದು ಇಲ್ಲಿ ಕ್ರಿಯಾರೋಪವನ್ನು ನೂಚಿಸಬೇಕಾಗಿರುವುದರಿಂದ ನನಗೆ ಎರಡು ನಿಮಿಷ ಅವಕಾಶ ಕೊಡಬೇಕೆಂದು ಕೇಳಿಕೊಂಡು ಆ ವಿಷಯ ಏನೆಂಬುದನ್ನು ತಿಳಿಸುತ್ತೇನೆ.

ಸ್ವಾಮಿ, ಈಗತಾನೆ ಸಭೆಯಲ್ಲಿ ಏನೊಂದು ಘಟನೆ ನಡೆಯಿತು ಇದರ ಸಂಬಂಧವಾಗಿ ಒಂದೆರೆಡು ವಿಷಯಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಈಗ ನಡೆಯುತ್ತಿರುವ ಈ ಶಾಸನ ಸಭೆಯು ಕಳೆದ ಫೆಬ್ರವರಿ 21ನೆಯ ತಾರೀಖು ಏನು ಪ್ರಾರಂಭವಾಯಿತೋ ಅಂದಿನಿಂದ ಇಂದಿನ ವರೆಗೂ ಇತ್ತ ಕಡೆಯವರು ಮತ್ತು ಅತ್ತ ಕಡೆಯವರು ಈ ಸಭೆಯ ಘನತೆ ಗೌರವಗಳನ್ನು ಹೇಗೆ ಎತ್ತಿ ಹಿಡಿಯಬೇಕು ನಾವು ಇಲ್ಲಿ ಯಾವರೀತಿ ಸೌಜನ್ಯತೆಯಿಂದ ವರ್ತಿಸಬೇಕು ಎಂಬ ವಿಚಾರದಲ್ಲಿ ತತ್ವಗಳನ್ನೇ ನೋ ಹೇಳುತ್ತಿದ್ದೇವೆ. ಆದರೆ ಯಾರೊಬ್ಬರೂ ಈ ಸದನದ ಘನತೆಗೌರವಗಳನ್ನು, ಅಥವಾ ನಮ್ಮ ರಾಜ್ಯದ ಒಂದು ಹಿರಿಮೆಯನ್ನು ಎತ್ತಿ ಹಿಡಿಯತಕ್ಕ ರೀತಿಯಲ್ಲಿ ವರ್ತಿಸುತ್ತಿಲ್ಲ ಎಂಬುದನ್ನು ತಿಳಿಸುವುದಕ್ಕೆ ನನಗೆ ಬಹಳ ವ್ಯಸನವಾಗುತ್ತದೆ.

ಯಾವ ರೀತಿ ಇಲ್ಲಿ ಕಾರ್ಯಕಲಾಪಗಳನ್ನು ಮುಂದುವರಿಸುತ್ತಿದ್ದಾರೆಂದರೆ, ಈ ದೇಶದ ಸಂಪತ್ತನ್ನು ಡುರ್ಪಿನಿಯೋಗ ಮಾಡುವುದಕ್ಕೆ ಬಂದಿದ್ದೇವೆಂದು ಕಾಣುತ್ತದೆ. ಈ ದೇಶದ ಅಭಿವೃದ್ಧಿಗಾಗಿ, ಒಂದು ಕಲ್ಯಾಣದೃಷ್ಟಿಯಿಂದ ನಾವು ಯಾರೊಬ್ಬರೂ ಕೆಲಸಮಾಡುತ್ತಾ ಇಲ್ಲ. ಈ ರೀತಿಯಾಗಿ ಪ್ರತಿದಿವಸವೂ ಒಂದು ಗಂಟೆಕಾಲ ವ್ಯರ್ಥವಾಗಿ ಕಾಲಕಳೆಯುತ್ತಿದ್ದೇವೆ. ಇದು ನಾಚಿಕೆಗೇಡು ಪ್ರಸಂಗವೆಂದು ನನಗೆ ವ್ಯಸನವಾಗುತ್ತದೆ. ಹಿರಿಯ ಸದಸ್ಯರಾದ ಮಾನ್ಯ ಶ್ರೀ ಚನ್ನಯ್ಯನವರು, ಕಳೆದ 40 ವರ್ಷಗಳಿಂದಲೂ ನಾನು ಪಾರ್ಲಿಮೆಂಟರಿ, ಪ್ರಜಾಪ್ರಭುತ್ವ ದಲ್ಲಿದ್ದುಕೊಂಡು ಎಲ್ಲವನ್ನೂ ನೋಡಿಕೊಂಡು ಬಂದಿದ್ದೇನೆ, ಯಾವ ರೀತಿ ಹಿಂದಿನವರು ಸಂಪ್ರದಾಯದ ರೀತಿಯಲ್ಲಿ ನಡೆಯುತ್ತಿದ್ದರು ಎಂಬುದನ್ನು ನೋಡಿದ್ದೇನೆ ಮತ್ತು ಕೇಳಿದ್ದೇನೆ, ಆದರೆ ಈ ದಿವಸ ನಡೆಯುತ್ತಿರುವ ಪ್ರಜಾಪ್ರಭುತ್ವದಲ್ಲಿ ನನ್ನಂಥವರು ಇರಬಾರದು, ರಾಜೀನಾಮೆ ಕೊಡಬೇಕೆಂದು ಬಹಳ ವ್ಯಸನದಿಂದ ಹೇಳಿದರು. ಇದರಲ್ಲಿ ನಮ್ಮ ಒಂದು ಸ್ವಪ್ರತಿಷ್ಠೆ ಬಹಳ ವಾಗಿದೆ ಎಂಬುದಾಗಿ ಹೇಳಬೇಕಾಗಿದೆ. ಇದರಿಂದಲೇ ನಾವು ಬಹಳವಾಗಿ ಹಿಂದುಳಿದಿದ್ದೇವೆ. ನಿಜವಾಗಿ ನಾವು ಈ ದೇಶದ ಘನತೆ, ಗೌರವವನ್ನು ಎತ್ತಿ ಹಿಡಿಯಬೇಕೆಂಬ ಉದ್ದೇಶದಿಂದ ಬಂದಿಲ್ಲವೆಂದು ನನಗೆ ತೋರುತ್ತದೆ. ಹಿರಿಯ ವಿದ್ವಾಂಸರು, ಅನುಭವಿಗಳು ಇನ್ನು ಮುಂದಾದರೂ ಈ ಮಾನ್ಯ ಸಭೆಯು ಗೌರವದೃಷ್ಟಿಯಿಂದ ಸರಿಯಾದ ರೀತಿಯಲ್ಲಿ ನಡೆದುಕೊಳ್ಳುತ್ತಾರೆಂದು ಭಾವಿಸಿ, ಅವರಿಗೆ ಮತ್ತೊಮ್ಮೆ ಕಳಕಳಿಯಿಂದ ಮನವಿಮಾಡಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಶಿವಪ್ಪ.—ಅಧ್ಯಕ್ಷರೇ, ಈಗ ಮಾನ್ಯ ಶ್ರೀ ದೊಡ್ಡಬೋರೇಗೌಡರು ಹೇಳಿದ ವಿಚಾರ ಈ ಸಭೆಯ ಘನತೆ, ಗೌರವಗಳನ್ನು ಪ್ರಶ್ನೆಮಾಡುವ ರೀತಿಯಲ್ಲಿ ಹಗುರವಾಗಿ ಹೇಳಿದ್ದಾರೆ. ಈ ಶಾಸನ ಸಭೆಯಲ್ಲಿ ಯಾರೂ ಈ ಸಭೆಯ ಘನತೆ, ಗೌರವಗಳನ್ನು ಕಾಪಾಡುವ ಉದ್ದೇಶದಿಂದ ಮಾತನಾಡುತ್ತಾ ಇಲ್ಲವೆಂದು ಹೇಳಿದರು, ನಾನು ಅವರಿಗೆ ಇಷ್ಟು ಹೇಳುತ್ತೇನೆ. ಈ ಸಭೆಯ ಸದಸ್ಯರೆಲ್ಲರೂ ಈ ಸಭೆಯ ಘನತೆ, ಗೌರವಗಳನ್ನು ಕಾಪಾಡುವ ಉದ್ದೇಶದಿಂದಲೇ ಇಲ್ಲಿ ಬಂದಿದ್ದಾರೆ. ಇವತ್ತು ಈ ಶಾಸನಸಭೆಯಲ್ಲಿ ನಡೆಸಿರುವ ವಿಚಾರಗಳ ಬಗ್ಗೆ ಕಳವಳ ವ್ಯಕ್ತ ಪಡಿಸುವುದು ಈ ಸಭೆಯ ಘನತೆ, ಗೌರವಗಳಿಗೆ ತಕ್ಕಹಾಗೆ ಕೆಲಸ ನಡೆದಿಲ್ಲವೆಂದು ಆತಂಕವಾಗಿ ಹೇಳುವ ಮಾತು, ಏನಿದೆಯೋ ಅದು ಅಷ್ಟು ಹಗುರವಾಗಿ ಹೇಳುವ ವಿಚಾರವಲ್ಲ. ಫೆಬ್ರವರಿ 21ನೇ ತಾರೀಖಿನಿಂದ ಏಪ್ರಿಲ್ 2ನೇ ತಾರೀಖಿನವರೆಗೆ ನಡೆದಂಥ ಕಾರ್ಯಕಲಾಪಗಳು ಈ ಸಭೆಯ ಘನತೆಗೆ ತಕ್ಕದ್ದಾಗಿಲ್ಲವೇ? ಆ ಕೆಲಸಕಾರ್ಯಗಳನ್ನು ಸಭಾಧ್ಯಕ್ಷರು ನಡೆಸಿಲ್ಲವೇ? ತಮ್ಮ ಒಂದು ನೇತೃತ್ವದಲ್ಲಿ ಮತ್ತು ತಮ್ಮ ಒಂದು ಮುಂದಾಳುತ್ವದಲ್ಲಿ ಈ ಸಭೆಯ ಕಾರ್ಯಕಲಾಪಗಳನ್ನು, ಯಾರೇ ಸದಸ್ಯರಾಗಲೀ ಟೀಕೆ ಮಾಡುವುದು ಈ ಸಭೆಯ ಘನತೆಗೆ ತಕ್ಕದ್ದೇ ಎಂಬುದು ಈಗ ಈ ಸಭೆಯ ಮುಂದಿದೆ. ಮಾನ್ಯ ಮಿತ್ರರಾದಂಥ ಶ್ರೀ ದೊಡ್ಡಬೋರೇಗೌಡರು ಮಾತನಾಡುವಾಗ ಅವರಿಗೆ ತಿಳಿದ ರೀತಿಯಲ್ಲಿ, ಬಹಳ ದುಃಖಪಟ್ಟವರಾಗಿ ಈ ಸಭೆಯನ್ನು ಅವಹೇಳನ ಮಾಡುವ ರೀತಿಯಲ್ಲಿ ಮಾತನಾಡಿದ್ದು ನೋಡಿದರೆ ಅದು ಯಾವ ಈ ಸಭಾಸದಸ್ಯರಿಗೂ ಯೋಗ್ಯವಾದುದಲ್ಲ. ಈ ಸಭೆಯ ಘನತೆ, ಗೌರವಗಳನ್ನು ಎತ್ತಿ ಹಿಡಿಯುವುದರಲ್ಲಿ ಇತ್ತಕಡೆಯ ಸದಸ್ಯರೂ ಸಹ ನಿಜವಾಗಿ ಅರ್ಹರು ಎಂಬುದಾಗಿ ಹೇಳುತ್ತೇನೆ. ಈ ಸಭೆಯಲ್ಲಿ ಧರಣೀ ಸತ್ಯಾಗ್ರಹ ಮಾಡುವ ಮಟ್ಟಕ್ಕೆ ಹೋಗಿ ಈ ಪ್ರಜಾಪ್ರಭುತ್ವದಲ್ಲಿ ಈ ಸಭೆಯ ಗೌರವವನ್ನು ಎತ್ತಿ ಹಿಡಿದಿದ್ದೇವೆ. ಇಡೀ ರಾಷ್ಟ್ರವೇ ಹೊಗಳು ವಂತಹ ರೀತಿಯಲ್ಲಿ ಈ ಸಭೆ ತನ್ನ ಕಾರ್ಯಗಳನ್ನು ಮಾಡಿದೆ. ಇಂಥಾ ಕಾಲದಲ್ಲಿ ನಾವು ಚರ್ಚೆ ಮಾಡಿ ಈ ಸಭೆಯ ಕಾಲವನ್ನು ವ್ಯರ್ಥ ಮಾಡಿದ್ದೇವೆ ಎನ್ನುವ ಮಾತನ್ನು ಹೇಳತಕ್ಕದ್ದು ಈ ಸಭೆಯ ಘನತೆಗೆ

ತಕ್ಕ ಮಾತಲ್ಲ. ಈ ಸಭೆಯ ಸದಸ್ಯರಾಗಿ ಅದು ಹೇಳತಕ್ಕ ಮಾತಲ್ಲ. ಅವರು ಹೇಳಿದಂತಹ ಮಾತು ಈ ಸಭೆಯನ್ನು ಅವಹೇಳನ ಮಾಡಿದಂತಾಗುತ್ತದೆ. ಈ ಸಭೆಯ ಕಾಲವನ್ನು ನಾವು ವ್ಯರ್ಥ ಮಾಡಿದ್ದೇವೆ ಎಂದು ಹೇಳಿದಂತಹ ಮಾತನ್ನು ನಾವು ಸಹಿಸುವುದಕ್ಕಾಗುವುದಿಲ್ಲ. ಮಾನ್ಯ ಸದಸ್ಯರು ಈ ಸಭೆ ಮಾಡಿದಂತಹ ಕಾರ್ಯವನ್ನು ಪ್ರಶ್ನೆ ಮಾಡಿದ್ದಾರೆ. ಇದು ಸರಿಯಲ್ಲ. ಈ ಸಭೆ ಬಹಳ ಜವಾಬ್ದಾರಿಯಿಂದ ತನ್ನ ಪವಿತ್ರವಾದ ಕರ್ತವ್ಯವನ್ನು ನಿರ್ವಹಿಸಿದೆ ಎಂದು ನಾನು ಹೇಳುತ್ತೇನೆ. ಈ ದೃಷ್ಟಿಯಿಂದ ನನ್ನ ಮಿತ್ರರಾದ ಶ್ರೀಮಾನ್ ದೊಡ್ಡಬೋರೇಗೌಡರು ಹೇಳಿದಂತಹ ಮಾತು ಸರಿಯಲ್ಲ.

Sri H. N. NANJE GOWDA.—I rise to a point of order.

Sri D. M. SIDDAIAH (Biligere).—I rise to a point of order.

Mr. SPEAKER.—The hon. Member Sri Siddaiah wants to raise a point of order.

Sri H. N. NANJE GOWDA —I stood up earlier, Sir, holding the book in my hand.

Mr. SPEAKER.—Allright. The member may state his point of order. Afterwards, I will allow Sri Siddaiah also to raise his piont of order.

Sri H. N. NANJE GOWDA.—I listened very carefully to my friend Sri Doddaboregowda. He did not observe rule 288. He spoke everything against this rule. Therefore, I request you under rule 315 to expunge all that he spoke because it was defamatory to this House and also defamatory to the Chair.

Mr. SPEAKER.—I have already provided one day to have an educative debate upon the law of privileges. The tests to be applied to determine breach of privileges may be discussed in that educative debate. This subject also can come up then. I do not want to come to a hasty conclusion on this point. I shall consider this point after hearing all the hon. members.

Sri H. N. NANJE GOWDA.—Till then can I go on accusing the Chair and can the Members go on casting aspersions ?

Mr. SPEAKER.—I may state that in order to determine whether it amounts to contempt or not, the word should be there on record. If it is not there the members cannot take notice of it.

Sri D. B. KALMANKAR.—Are you reserving your ruling ?

Mr. SPEAKER.—After hearing the educative debate I shall take a decision.

Sri H. N. NANJE GOWDA.—You said just now that you have reserved your ruling.

Mr. SPEAKER.—I am not going to permit any more discussion. I shall consider the matter after the educative debate.

Sri H. N. NANJE GOWDA.—I want some clarification from the Chair. After hearing the educative debate, if the Chair is to give the ruling, until then can we talk as we like accusing the Chair and the House ?

Mr. SPEAKER.—Nobody can accuse the Chair.

† ಶ್ರೀ ಡಿ. ಎಂ. ಸಿದ್ದಯ್ಯ.—ತಮಗೆ ನಾನು ಬಹಳ ವಿನಯಪೂರ್ವಕವಾಗಿ ವಿಜ್ಞಾಪಿಸಿ ಕೊಳ್ಳುತ್ತೇನೆ. ಏನೋ ಅನಿವಾರ್ಯ ಘಟನೆ ನಡೆಯುತು. ಆ ಕಡೆಯ ಸದಸ್ಯರೂ ಉದ್ವೇಗ ಗೊಂಡರು. ಈ ಕಡೆಯ ಸದಸ್ಯರೂ ಉದ್ವೇಗಗೊಂಡರು. ಆಗ ಶ್ರೀ ಚನ್ನಯ್ಯನವರು ಎದ್ದು ಸಮಾಧಾನದ ಮಾತುಗಳನ್ನಾಡಿದರು. ಆಗ ಎರಡ್ಮೂ ಮುಗಿದು ಪರಿಸಮಾಪ್ತಿಯಾಗಿ ರೂರ್ಸ್ ಪ್ರಕಾರ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕಾಗಿತ್ತು. ಅಷ್ಟು ಹೊತ್ತಿಗೆ ಶ್ರೀ ದೊಡ್ಡ ಬೋರೇಗೌಡರು ಎದ್ದು ನಭೆಯ ಕಾಲವನ್ನು ಸದಸ್ಯರು ವ್ಯರ್ಥಾ ವ್ಯಯಮಾಡುತ್ತಿದ್ದಾರೆ ಮತ್ತು ಬೇಜವಾಬ್ದಾರಿಯಿಂದ ವರ್ತಿಸುತ್ತಿದ್ದಾರೆಂದು ಹೇಳಿದರು. ಆಮೇಲೆ ಮಾನ್ಯ ಶಿವಪ್ಪನವರೂ ಭಾಷಣ ಮಾಡಿದರು; ಶ್ರೀ ನಂಜೇಗೌಡರೂ ಭಾಷಣ ಮಾಡಿದರು. ಡೆಪ್ಯೂಟಿ ಮಿನಿಸ್ಟರಿಗೆ ಸ್ಟೇಟುಮೆಂಟ್ ಮಾಡಲು ಅವಕಾಶ ಕೊಟ್ಟಿದ್ದಪಕ್ಷದಲ್ಲಿ, ಇದೊಂದೂ ಕೂಡ ಉದ್ಭವಿಸುತ್ತಾ ಇರಲಿಲ್ಲ. ನಾನು ವಿಜ್ಞಾಪಿಸಿಕೊಳ್ಳುವುದು, ಒಬ್ಬ ಸದಸ್ಯರು ಇನ್ನೊಬ್ಬ ಸದಸ್ಯರಿಗೆ ಆ ರೀತಿ ಹೇಳುವುದು ಉಚಿತವಲ್ಲ. ನಾವು, ಯಾವ ಪಕ್ಷದವರೇ ಆಗಿರಲಿ, ಈ ಸಭೆಯ ಘನತೆ ಗೌರವವನ್ನು ಕಾಪಾಡುವಕ್ಕೆ ಬಂದಿರುವುದು. ಯಾವ ಪಕ್ಷವೇ ಅಡಳಿತದಲ್ಲಿರಲಿ, ಯಾವು ತಪ್ಪು ಮಾಡಿದರೂ ಅದು ತಪ್ಪೇ ಆಗುತ್ತದೆ. ಈ ಸಭೆಯ ಘನತೆ ಗೌರವವನ್ನು ಎತ್ತಿ ಹಿಡಿಯುವುದು ಎಲ್ಲರ ಕರ್ತವ್ಯ. ಈಗ ಉಪಮಂತ್ರಿಗಳಿಗೆ ಸ್ಟೇಟ್‌ಮೆಂಟ್ ಮಾಡಲು ಹೇಳಿ, ಅದಲ್ಲದೆ ನುಮ್ಮನೆ ಕೂತುಕೊಂಡು ಕಾರ್ಯಕಲಾಪಗಳು ಈ ರೀತಿ ನಡೆಯುತ್ತಾ ಇದ್ದರೆ, ಯಾವ ರೀತಿ ನಡೆಯುತ್ತಾ ಇವೆ ಎನ್ನುವುದು ಅರ್ಥವಾಗುವುದಿಲ್ಲ. ತಮ್ಮಲ್ಲಿ ಕೃತಜ್ಞತೆಯಿಂದ ವಿಜ್ಞಾಪಿಸಿಕೊಳ್ಳುವುದು ಇಷ್ಟೆ.

Sir, you are the custodian of the rights and privileges and the dignity and decorum of this House. Further I would request the Chair kindly to see that the Deputy Minister is allowed to make his statement if he is ready. If he is not ready or if he wants some more information or if you feel that the Minister for Education should come, you may summon him and ask him to make the statement. You are the person who has been endowed with the task of upholding the entire prestige and honour of this House. Therefore I appeal to you to see that procedure is followed so that we can conduct our business in a dignified and becoming manner.

Mr. SPEAKER.—I appreciate the sentiments of the hon. Member very much.

ಶ್ರೀ ಕೆ. ಪುಟ್ಟಸ್ವಾಮಿ.—ನಾನು ವ್ಯರ್ಥಾ ಚರ್ಚೆಯನ್ನು ಮುಂದುವರಿಸಿಕೊಂಡು ಹೋಗುವುದಕ್ಕೆ ಅಪೇಕ್ಷೆಪಡುವುದಿಲ್ಲ. ತಮ್ಮಲ್ಲಿ ಒಂದೇ ವಿಜ್ಞಾಪನೆ ಮಾತ್ರಿಕೊಳ್ಳುವುದು. ಮಾನ್ಯನದನ್ಯರಾದಂತಹ ದೊಡ್ಡಬೋರೇಗೌಡರು ಮಾಡಿದ ಭಾಷಣದಲ್ಲಿ ಯಾವ ಅನ್‌ಪಾರ್ಲಮೆಂಟರಿ ಪದವಾಗಲೀ ಇನ್‌ಡೀಸೆಂಟ್ ಶಬ್ದವಾಗಲಿ ಅಥವ ಸಭೆಯ ಗೌರವಕ್ಕೆ ಮತ್ತು ಘನತೆಗೆ ಧಕ್ಕೆ ತರತಕ್ಕ ಪದವಾಗಲೀ ಇರಲಿಲ್ಲ. ಆದರೆ ಮಾನ್ಯ ಸದಸ್ಯರಾದಂತಹ ಶ್ರೀ ಸಿದ್ದಯ್ಯನವರು ಹೇಳಿದಂತೆ ತಾವು ವಿದ್ಯಾ ಇಲಾಖೆಯ ಉಪಸಚಿವರನ್ನು ಹೇಳಿಕೆ ಕೊಡುವುದಕ್ಕೆ ಕರೆದ ಮೇಲೆ ಅದು "ಆರ್ ಮೋಸ್ಟ್ ವ್ಯಾಕ್ಯುಂ". ವ್ಯಾಕ್ಯುಂನಲ್ಲಿ ಏನು ಪಾಯಿಂಟ್ ಆಫ್ ಆರ್ಡರ್ ಬರುತ್ತದೆ? ಎರಡ್ಮೂ ಮುಗಿದ ಮೇಲೆ ಬಂದಂಥ ಪಾಯಿಂಟ್ ಆಫ್ ಆರ್ಡರ್ ಮೇಲೆ ಹಿಂದೆ ಮುಗಿದಂತಹ ಅಧ್ಯಾಯ ಹೊಸದಾಗಿ ಪ್ರಾರಂಭವಾಯಿತು. ಆ ಕಾರಣದಿಂದ ಪಾಯಿಂಟ್ ಆಫ್ ಆರ್ಡರ್‌ಗೆ ಅವಕಾಶವಿಲ್ಲ. ಮಾನ್ಯ ದೊಡ್ಡಬೋರೇಗೌಡರಿಗೂ ಕೂಡ ಭಾಷಣ ಮಾಡುವುದಕ್ಕೆ ಅವಕಾಶ ಕೊಡಬೇಕಾಗಿರಲಿಲ್ಲ. ಅವರು ಮಾತನಾಡಿದ್ದರಲ್ಲಿ ರೂರ್ಸ್ 315ರ ಪ್ರಕಾರ ಕ್ರಮ ತೆಗೆದುಕೊಳ್ಳತಕ್ಕಂತಹ ಪದಗಳು ಇವೆ ಎನ್ನುವುದನ್ನೂ ನಾವು ಒಪ್ಪುವುದಿಲ್ಲ.

Sri S. SIVAPPA.—Sir, you definitely promised that after the Hon. Minister Sri Puttaswamy you will ask the Deputy Minister for Education to reply.

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ, ನನಗೆ ಎರಡು ನಿಮಿಷ ಮಾತನಾಡುವುದಕ್ಕೆ ತಾವು ಅವಕಾಶ ಕೊಡಬೇಕು.

Sri H. N. NANJE GOWDA.—Sir, Doddabore Gowda said that we are wasting the time of the House, including the Chair. Those words have not been expunged.

Mr. SPEAKER.—I have reserved my ruling.

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ, ಶ್ರೀ ದೊಡ್ಡಬೋರೇಗೌಡರು.....

Mr. SPEAKER.—I request the hon. Member to resume his seat.

ಶ್ರೀ ವಾಟಾಳ್ ನಾಗರಾಜ್.—ಇಲ್ಲ, ತಾವು ನನಗೆ ಮಾತನಾಡಲು ಅವಕಾಶ ಕೊಡಲೇ ಬೇಕು. ತಾವು ಕುಳಿತುಕೊಂಡರೆ ನಾನು ಎರಡು ನಿಮಿಷದಲ್ಲಿ ಹೇಳಿ ಮುಗಿಸುತ್ತೇನೆ.

Mr. SPEAKER.—I direct the hon. Member Sri Nagaraj to withdraw from the House under Rule 308.

ಶ್ರೀ ವಾಟಾಳ್ ನಾಗರಾಜ್.—ಏಕೆ ಸ್ವಾಮಿ, ನಾನು ತಮ್ಮ ಬಗ್ಗೆ ಅಗೌರವದಿಂದೇನೂ ನಡೆದುಕೊಂಡಿಲ್ಲ.

Mr. SPEAKER.—I direct the hon. Member to withdraw. The member may please get out.

ಶ್ರೀ ವಾಟಾಳ್ ನಾಗರಾಜ್.—ಏಕೆ ಗೆಟ್ ಔಟ್ ಎಂದು ಹೇಳುತ್ತೀರಿ? ಏನು ತಪ್ಪು ಮಾಡಿದ್ದೇನೆ. ನಾನು ಹೋಗುವುದಿಲ್ಲ.

Mr. SPEAKER.—I direct the member to withdraw. Please withdraw.

ಶ್ರೀ ಎಸ್. ಶಿವಪ್ಪ.—ತಾವು ಕೋಪದಲ್ಲಿ ಮಾತನಾಡಿದರೆ ಅದು ಒಳ್ಳೆಯದಾಗುವುದಿಲ್ಲ, ತಾವು ಕೋಪ ಮಾಡಿಕೊಳ್ಳಬಾರದು.

ಶ್ರೀ ಎ. ಮುನಿಯಪ್ಪ (ಬಾಗೇಪಲ್ಲಿ).—ಸ್ವಾಮೀ, ತಾವು ಕೊಟ್ಟ ರೂಲಿಂಗು ಏನಾಯಿತು ? ಅಧ್ಯಕ್ಷರ ಸೂಚನೆಯಂತೆ ಅವರು ವಿತ್ ಡ್ರಾ ಮಾಡಬೇಕಾಗುತ್ತದೆ ಅಲ್ಲವೆ ?

Mr. SPEAKER.—I request the hon. Leader of the Opposition to ask Sri Nagaraj to obey the Chair. I have ordered him to withdraw under Rule 308.

Sri S. SIVAPPA.—He will do it. ನಾನಾಗಲೇ ತಮಗೆ ಸೂಚನೆ ಕೊಟ್ಟೆ. ತಾವು ಮಾತಾಡುವಾಗ ಸ್ವಲ್ಪ ಸಹನೆಯಿಂದ ಹೇಳಿದರೆ ಸರಿಯಾಗಿರುತ್ತದೆ. ಸ್ವಲ್ಪ ತಾವು ಹೇಳುವ ಟೋನು ಕೆಲವರಿಗೆ ಸರಿಯಾಗಿ ಕಾಣುತ್ತಿಲ್ಲ. ಇವಕ್ಕಾಗಿ ತಮ್ಮಲ್ಲಿ ಆಗಲೇ ಪ್ರಾರ್ಥನೆ ಮಾಡಿಕೊಂಡೆ.

ಶ್ರೀ ಎಸ್. ಚನ್ನಯ್ಯ.—ಸ್ವಾಮೀ, ತಾವು ಹೊರಗೆ ಹೋಗಬೇಕು ಎಂದು ರೂಲಿಂಗು ಕೊಟ್ಟಿದ್ದೀರಿ. ಅದರ ಬಗ್ಗೆ ಹೇಳುತ್ತಿಲ್ಲ. ಆದರೆ ತಾವು ರೂಲಿಂಗು ಕೊಡುವಾಗ ಗೆಟ್ ಔಟ್ ಎಂದು ಮಾನ್ಯ ಸದಸ್ಯರಿಗೆ ಹೇಳುವುದು ತಪ್ಪು. ದಯವಿಟ್ಟು ತಾವು ಹೇಳಿರುವ ಗೆಟ್ ಔಟ್ ಎನ್ನುವ ಶಬ್ದಗಳನ್ನು ವಾಪಸು ತೆಗೆದುಕೊಂಡರೆ ಒಳ್ಳೆಯದು ಎಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

Mr. SPEAKER.—I used the word 'get out' in the sense of withdraw. ವಿತ್ ಡ್ರಾ ಎನ್ನುವ ಅರ್ಥದಲ್ಲಿ ಇದನ್ನು ಹೇಳಿದ್ದೇನೇ ಏನಾ ಬೇರೆ ಯಾವ ಅರ್ಥದಲ್ಲೂ ನಾನು ಹೇಳಲಿಲ್ಲ.

Sri K. PUTTASWAMY.—Sir, may I make a humble submission ? In order to maintain the dignity of the House, I would very much like Sri Vatal Nagaraj to obey the direction of the Chair.

Mr. SPEAKER.—I request the hon. Leader of the Opposition to ask Sri Nagaraj to withdraw.

Sri S. SIVAPPA.—I will request him to withdraw for a few minutes and come back. ನಾನು ತಮ್ಮಲ್ಲಿ ಪ್ರಾರ್ಥನೆ ಮಾಡುವುದು ನಿಮ್ಮ ಮನೋಭಾವನೆ ಒಳಗೆ ನರಿಯಾಗಿದ್ದರೂ ಇಲ್ಲಿ ನೂಜನೆ ಕೊಡುವಾಗ ತಾವು ಉಪಯೋಗಿಸುವ ಶಬ್ದ, ಎಂದರೆ ಗೆಟ್ ಔಟ್ ಎಂದು ಹೇಳುವುದು, ಅಷ್ಟು ಒಳ್ಳೆಯ ಶಬ್ದವಲ್ಲ.

ಅಧ್ಯಕ್ಷರು.—ನಾನು ವಿತ್ ಡ್ರಾ ಎನ್ನುವ ಅರ್ಥದಲ್ಲಿ ಮಾತ್ರ ಹೇಳಿದ್ದು. ಬೇರೆ ಏನಿಲ್ಲ. It is only in that sense I used it.

Sri H. N. NANJE GOWDA.—Sri Doddabore Gowda made a remark that we, on this side including the Chair are wasting the time of the House. That point of Order was brought to the notice of the House under Rule 315. The Chair did not agree to it. Now how can the Chair take power under Rule 308 ? Therefore, Sri Nagaraj need not go out of this House.

Mr. SPEAKER.—I have directed him to withdraw and he has to obey. I have reserved my Ruling with regard to Sri Doddabore Gowda's remarks, whether it is parliamentary or not.

Sri H. N. NANJE GOWDA.—I did not say that it was unparliamentary.

Mr. SPEAKER.—I shall take a decision only after hearing the debate on Privileges, not till then.

Sri H. N. NANJE GOWDA.—I wanted those words to be expunged, because it was a reflection on the business of the House. I never said that it was unparliamentary. The Chair did not agree to that. The Chair cannot give direction under Rule 308. Therefore, I say that Sri Vatal Nagaraj need not go out of the House.

Mr. SPEAKER.—As hon. Member Sri Vatal Nagaraj has not withdrawn from the House and in order to enable his friends to persuade him to withdraw from the House, I adjourn the House for half-an-hour.

The House adjourned at Thirty Minutes past Three of the Clock and reassembled again at Twenty Minutes past Four of the Clock.

[MR. SPEAKER in the Chair]

Sri M. S. KRISHNAN.—Sir, I have a point of order.....

Mr. SPEAKER.—The hon. Member cannot raise a point of order now because under rule 311, a point of order be raised only with respect to business on hand, or with respect to arrangement of business or keeping of order in the House.

Sri M. S. KRISHNAN.—I am glad you have drawn my attention to this. Sub-rule (2) says that a point of order may be raised in relation to the business of the Assembly. The business that had been taken up

before you adjourned the House has not yet reached a finality and it is still on the anvil.

MR. SPEAKER.—I have not called any particular item of business.

SRI M. S. KRISHNAN.—There was already some subject before we adjourned. You were pleased to adjourn the House when several points of orders were raised, without giving any ruling. Sri H. N. Nanjegowda had raised point of order. Sri Doddabore Gowda had made some statement. The situation of this House was, you as Speaker made certain remarks and ordered that Sri VATAL NAGARAJ should withdraw. Later on, in a fit of passion and anger, you asked him to get out. We pointed out that the expression 'get out' was not proper and with all due respect, you were pleased to say, that the expression was used in a particular sense, in the sense that SRI VATAL NAGARAJ should withdraw. My point of order is whether it is enough if the Speaker says that it was used in a particular sense. I was just looking into the Parliamentary Procedure by M. N. Kaul: You will pardon me if I read what the late Prime Minister Sri JAWAHARLAL NEHRU spoke about the Speaker:

Speaking on March 8, 1958 on the occasion of the unveiling of the portrait of Sardar Patel, Prime Minister Jawaharlal Nehru observed:

> "The Speaker represents the House. He represents the dignity of the House, the freedom of the House and because the House represents the nation, in a particular way, the Speaker becomes the symbol of the nation's freedom and liberty. Therefore, it is right that, that should be an honoured position, a free position and should be occupied always by men of outstanding ability and impartiality."

(Extract from Practice and Procedure of Parliament by M. N. Kaul—S. L. Shakdar—P. 93)

What he has said there, is on all fours applicable to the Hon. Speaker here, because we consider you as the repository of all the privileges and dignity of the House. We look up to you to protect the interests of both the sides. You should protect the interests of all sides of the House. What the late Panditji said applies to you also. Now what has happened is, in respect of the word used, it is not enough if you say that this word was used in a particular sense. I will read an extract from page 823 of Lok Sabha Debates 30-11-1955

(Page 823-824—Practice and Procedure of Parliament by M. N. Kaul—S. L. Shakdar)

> " A member or a Minister may invite the Speaker's attention at the time, when the defamatory or indecent or unparliamentary or undignified words are used, or subsequently, and if the Speaker agrees, he may order their expunction "

(SRI M. S. KRISHNAN)

"On the attention of the Speaker being drawn to objectionable words by an officer of the Secretariat or otherwise, the Speaker may order the expunction of such words.

The words used in the course of the speech in the House may be changed.

"The word 'Dogla' used with reference to some members was objected to, as being vulgar. The member who used the word explained that the meaning intended by him was 'with two voices' and not 'illegitimate'. Thereupon the Speaker directed the deletion of the word 'Dogla' and the use of the word 'Domukh' in substitution therefor which brought out the Member's meaning clearly."

So you have got a right to change it. You did not mean that Sri VATAL NAGARAJ should get out. You meant that he should withdraw from the House.

In the same way, the word 'DOGRA' which was used by some Member was considered to be vulgar and illegitimate. The Speaker directed the deletion of the word 'DOGRA'. I would like to refer to this particular position as it happened in LOK SABHA Debate of 30th November 1955. This word was substituted as directed by the Hon'ble Speaker. I request you to kindly consider this precedent and substitute the word *withdraw* for the expression "get out".

ಶ್ರೀ ಎಸ್. ಶಿವಪ್ಪ.—ಸಭಾಪತಿಯವರೇ, ಈಗ ವಾಟಾಳ್ ನಾಗರಾಜ್‌ರವರು ವಿತಡ್ರಾ ಮಾಡಬೇಕು ಎಂದು ತಾವು ಹೇಳುವಾಗ ಉದ್ವೇಗದಲ್ಲೋ ಬಹುಶಃ ರಭಸದಲ್ಲೋ ಗೊತ್ತಾಗಲಿಲ್ಲ "get out" ಎಂಬ ಶಬ್ದವನ್ನು ಉಪಯೋಗಿಸಿದ್ದೀರಿ. ಬಹಳ ಉದ್ವೇಗದಲ್ಲಿ ಹೇಳಿರಬಹುದು. ತಾವು ಶಾಂತರೀತಿಯಲ್ಲಿ ದಯೆಯಿಟ್ಟು ಯೋಚನೆ ಮಾಡಬೇಕು. ಕೋಪದಲ್ಲೋ ಏನೋ ಆ ಶಬ್ದವನ್ನು ಉಪಯೋಗಿಸಿರಬಹುದು. "ಗೆಟ್ ಔಟ್" ಎಂಬ ಶಬ್ದ ಅನ್‌ಪಾರ್ಲಮೆಂಟರಿ ಆರ್ಥ ಕೊಡುವುದರಿಂದ ಅದಕ್ಕೆ ಬದಲಾಗಿ 'ವಿತಡ್ರಾ' ಎಂಬ ಶಬ್ದವನ್ನು ಹೇಳುವುದು ಒಳ್ಳೆಯದು. ಅಧ್ಯಕ್ಷ ಪೀಠದ ಬಗ್ಗೆ, ಅಧ್ಯಕ್ಷರ ಬಗ್ಗೆ ನಮಗೆ ವಿಶೇಷ ಗೌರವವಿದೆ, ನಾವೂ ಕೂಡ ಈಗ ನಡೆದಿರುವ ಕಾರ್ಯಕರಾಪದಲ್ಲಿ ಭಾಗಿಯಾಗಿದ್ದೇವೆ. ಬೈಸ್ಟ್ಯಾಂಡರ್ ಆಫ್ ಟಂಗ್ ಅಥವ ಕೋಪದಲ್ಲಿ ಆ ಶಬ್ದ ತಮ್ಮ ಬಾಯಿಂದ ಬಂದಿರಬಹುದು. ಆದುದರಿಂದ ತಮ್ಮ ಗೌರವಕ್ಕನುಗುಣವಾಗಿ ತಾವು ಹೇಳಿರುವ ಆರ್ಥ ಬರುವಾಯಿಸಿಕೊಳ್ಳಲು ಬೇರೆ ಮಾತನ್ನು ಉಪಯೋಗಮಾಡಿ 'ವಿತಡ್ರಾ' ಎಂಬ ಮಾತನ್ನು ಹೇಳಿ ಈ ಸಭೆಯ ಘನತೆಯನ್ನು ಕಾಪಾಡಬೇಕು ಎಂದು ಸೂಚಿಸುತ್ತೇನೆ.

4-30 P.M.

MR. SPEAKER.—I have heard the hon. Members, Leader of the Opposition and Sri M. S. Krishnan. The observations of the late Prime Minister is a classic principle and I completely agree with that. When I requested the hon. Member Sri Vatal Nagaraj to withdraw, I repeated that nearly ten times. He did not do it. On the contrary, he was ordering me to sit down. Then, in the circumstances I had no alternative but to act under Rule 308. I asked him to withdraw. Probably, he did not understand. It was then that I used the words "get out"

As already explained, I have used it in the sense of ' withdraw '. " Get Out " means " withdraw ". I have no objection to substitute it with the word " withdraw. " Of course, I had not meant nor had I any intention to wound the feelings of Sri Nagaraj. It is with great reluctance I had to take that decision. I did not want to hurt him.

Now after all this I request the hon. Member Sri Vatal Nagaraj to obey the Chair and restore the dignity of the House,

(Sri Vatal Nagaraj stood up)

Sri K. PUTTASWAMY.—I rise to a point of order. There is no scope for a speech by the hon. Member Sri Vatal Nagaraj.

†Mr. SPEAKER.—May I request the hon. Member withdraw from the House and obey the Chair ? There is no scope for any speech making. In the name of the House, in the name of discipline and dignity of the House, I request Sri Vatal Nagaraj to withdraw from the House.

Sri S. SIVAPPA.—Sir, now the Hon. Speaker has gladly substituted the word "get out" with gesture which is in conformity with the dignity of the House. Now, whether it is right or wrong, my young friend Sri Vatal Nagaraj has been asked by the Speaker to withdraw. So I earnestly request Sri Vatal Nagaraj to honour the verdict of the Chair at least for two minutes to respect the feelings. On behalf of all of us I am requesting him.

(Sri Vatal Nagaraj withdrew)

Mr. SPEAKER.—It is so good of Sri Vatal Nagaraj.

†ಶ್ರೀ ಎಚ್. ಎನ್. ನಂಜೇಗೌಡ.—ಮಾನ್ಯ ಸಭಾಪತಿಯವರೇ, ಈ ಸಭೆಯ ಗೌರವದ ಬಗ್ಗೆ ಭಾರಿ ಆಸೆ ವಹಿಸಿ ಈ ಸಭೆಯ ಘನತೆ ಗೌರವವನ್ನು ಎತ್ತಿ ಹಿಡಿಯುವ ಕಾರ್ಯವನ್ನು ತಾವು ಈಗ ಕೈಗೊಂಡಿದ್ದೀರಿ, ಇದನ್ನು ನೋಡಿ ಬಹಳ ನಂತೋಷವಾಗುತ್ತದೆ. ಆದರೆ ಒಂದ ಅಂಶವನ್ನು ತಾವು ಈಗಲೇ ಹೇಳಬೇಕಾಗಿದೆ, ಏಕೆಂದರೆ ಈ ಮಾನ್ಯ ಸಭೆಯಲ್ಲಿ ಮಾನ್ಯ ಸದಸ್ಯರಾದ ದೊಡ್ಡ ಬೋರೇಗೌಡರು ಹೇಳಿದಂತಹ ಮಾತು ಈ ಸಭೆಯ ಘನತೆ ಗೌರವಕ್ಕೆ ಕುಂದುಬರುತ್ತದೆ ಎಂದು ಹೇಳಿ ಪಾಯಿಂಟ್ ಆಫ್ ಆರ್ಡರ್ ಮುಖಾಂತರ ತಮ್ಮ ಗಮನಕ್ಕೆ ತಂದು ಅದು ಬ್ರೀಚ್ ಆಫ್ ಆರ್ಡರ್ ಆಗುವಂತಹ ಪರಿಸ್ಥಿತಿ ಇದೆ ಎಂದು ಹೇಳಿ ಅದನ್ನು ಎಕ್ಸ್‌ಪಂಜ್ ಮಾಡಬೇಕೆಂದು ಹೇಳಿ ದಾಗ ತಮ್ಮ ರೂಲಿಂಗನ್ನು ರಿಸರ್ವ್ ಮಾಡಿದಿರಿ. ಪ್ರಿವಿಲೇಜಸ್, ಪ್ರೊಸೀಡಿಂಗ್ಸ್ ಆಫ್ ದಿ ಪಾರ್ಲಿಮೆಂಟ್ ಎನ್ನುವ ಈ ಪುಸ್ತಕದ 450ನೇ ಪುಟದಲ್ಲಿರುವ ಒಂದೆರಡು ವಿಷಯಗಳನ್ನು ಮಾತ್ರ ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ.

> ".....When the attention of the Speaker is thus called to the supposed breach of order he at once gives his decision and if in his opinion the member whose words or conduct are complained of is disorderly, calls upon him to conform to the rules of the House".

ಇದನ್ನು ತಾವು ತಕ್ಷಣ ಮಾಡಬೇಕು. ಇಲ್ಲದೇಹೋದ ಪಕ್ಷದಲ್ಲಿ ಎಕ್ಸ್‌ಪಂಜ್ ಮಾಡುವುದ ಕ್ಕಾದರೂ ಆರ್ಡರ್ ಮಾಡಬೇಕಾಗುತ್ತದೆ. ಹಾಗಲ್ಲದಿದ್ದರೆ ನಾನು ಮೊದಲೇ ಹೇಳಿದ ಹಾಗೆ ತಾವು ಎಜ್ಯುಕೇಟಿವ್ ಡಿಬೇಟ್ ಮಾಡಿದಮೇಲೆ ತಮ್ಮ ತೀರ್ಮಾನವನ್ನು ಕೊಡುತ್ತೇನೆ ಎಂದು

(ಶ್ರೀ ಎಚ್. ಎನ್. ನಂಜೇಗೌಡ)

ಹೇಳಿದರೆ ಅಲ್ಲಿಯವರೆಗೂ ನಾವು ಬಹುಶಃ ನಮ್ಮ ಮನಸ್ಸೋಇಚ್ಛೆ ಪಾರ್ಲಿಮೆಂಟರಿ ನಡವಳಿಕೆಯನ್ನು ಸೂಚಿಸಿದ ಹಾಗೆ ಡಿಫೇಮೇಟರಿ ಪದ್ಯವನ್ನು ನಭೆಯ ಘನತೆ ಗೌರವ, ಮರ್ಯಾದೆಗೆ ಕುಂದು ಬರತಕ್ಕ ಮಾತುಗಳನ್ನು ಹೇಳುವುದಕ್ಕೆ ಅವಕಾಶ ಮಾಡಿಕೊಟ್ಟಹಾಗಾಗುತ್ತದೆ. ಆದ್ದರಿಂದ ತಕ್ಷಣ ಈಗಲೇ ತಮ್ಮ ಒಂದು ರೂಲಿಂಗನ್ನು ಕೊಡಬೇಕು, ಮುಂದೆ ಮಾತಾಡುವವರು ಮಾತನಾಡತಕ್ಕ ಕಾಲದಲ್ಲಿ ಒಕ್ಕಟ್ಟಾಗಿ ಮಾತನಾಡಬೇಕಾಗುತ್ತದೆ, ನಭೆಯ ಗೌರವ, ಘನತೆಯನ್ನು ಯಾವರೀತಿ ಉಳಿಸಬೇಕೋ ಆ ರೀತಿ ಉಳಿಸತಕ್ಕ ಮಾತುಗಳನ್ನು ಪ್ರಯೋಗಮಾಡಬೇಕಾಗುತ್ತದೆ. ಆದ್ದರಿಂದ ತಕ್ಷಣ ತಾವು ಒಂದು ರೂಲಿಂಗ್ ಕೊಟ್ಟು ದೊಡ್ಡಬೋರೇಗೌಡರು ಆಡಿರತಕ್ಕ ಮಾತನ್ನು ವರದಿಯಿಂದ ತೆಗೆದುಹಾಕಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

Sri K. PUTTASWAMY.—I am on a different point of order. He cannot have another say over the point of order. We expect you to conform to the rules.

